# ಅಖಿಲ ಭಾರತ ಪತ್ರಿಕೆ

**ಸಂಪಾದಕರು :**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್.ಡಿ.
ಶಿವಗಿರಿ, ಧಾರವಾಡ – 580007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪ್ಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ.**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560078.

**ಆಫ್‌ಸೆಟ್ ಮುದ್ರಣ :**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560078.

**ಪ್ರಕಾಶಕರು :**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560078.
ಫೋನ್ : 080 – 2244 9882
http://abp.sirinudi.org


## ಪರಿವಿಡಿ

### "ಪ್ರಸವಪೂರ್ವ ಶಿಕ್ಷಣ"


**ಅನು: ಡಾ. ಬಿ. ಆರ್. ಭೀಡ**
ಪುರುಷ ಮತ್ತು ಸ್ತ್ರೀ ಇವರನ್ನು ಕುರಿತು 3

**ಅನು: ಶ್ರೀ. ಪುಟ್ಟು ಕುಲಕರ್ಣಿ**
ಅಭೀಪ್ಸೆ ಮತ್ತು ಸಿದ್ಧತೆ 10

**ಅನು : ಡಾ. ಕೆ.ಎಸ್. ಆಮೂರ**
ನಿಜವಾದ ಮಾತೃತ್ವ ಮತ್ತು
ಹುಟ್ಟಿಗೆ ಮುಂಚಿನ ಪ್ರೇಮ 21

ಜನ್ಮ ಹಾಗೂ ಚೈತ್ಯ ಸತ್ತೆ 26

**ವಾರ್ತಾಪತ್ರ** 46

## (All India Magazine) ಸಂಪಾದಕೀಯ:

ಬಹಳಷ್ಟು ಮಾನವ ಕಲ್ಪನೆಗಳನ್ನು ಯೋಜನೆಯಿಲ್ಲದೆ ಹಾಗೂ ಆಕಸ್ಮಿಕವಾಗಿ ಮಾಡಲಾಗಿರುತ್ತದೆ ಎಂಬುದು ನಿಜವಾಗಿ ಭವ್ಯರೀತಿಯಲ್ಲಿ ಕಳವಳವನ್ನುಂಟು ಮಾಡುವ ವಿಷಯ. ಮಗುವನ್ನು ಹೆರಬೇಕೆಂದಾಗ ತಂದೆತಾಯಂದಿರು ಪ್ರಜ್ಞಾವಂತರಾಗಿರುವುದಿಲ್ಲ. ಕೇವಲ ವೈವಾಹಿಕ ಸಂಬಂಧ ಮಗುವನ್ನು ಕೊಡುವುದರಲ್ಲಿ ಪರಿಣಾಮಕಾರಿ ಆಗಬಾರದು, ಆದರೆ ಅದು ಪ್ರಾರ್ಥನೆ ಹಾಗೂ ಅಭೀಪ್ಸೆಗಳ ಪರಿಣಾಮವೆಂದಾಗಿ ಆಗಬೇಕು. ಆಧ್ಯಾತ್ಮಿಕ ಬೀಜ ಈ ರೂಪದಲ್ಲಿ ಅಭಿವೃದ್ಧಿ ಹೊಂದಿದಾಗ ಅದು ಭಗವಂತನಿಗೆ ಸೇರಿರುತ್ತದೆ. ಪುರುಷ ಹಾಗೂ ಸ್ತ್ರೀ ಮಾಡಬೇಕಾದುದು ಏನೆಂದರೆ ಅವರು ಭಗವಂತನಿಗೆ ಪ್ರಾರ್ಥನೆ ಮಾಡಬೇಕು, ಅವನನ್ನು ಆಹ್ವಾನಿಸಬೇಕು ಮಗು ರೂಪುಗೊಳ್ಳುತ್ತಿರುವಾಗ ಅದರ ಮೇಲೆ ಅಧ್ಯಕ್ಷತೆ ವಹಿಸಬೇಕು ಹಾಗೂ ಕೊನೆಗೆ ಆ ದೇಹಕ್ಕೆ ಆತ್ಮವನ್ನು ಕೊಡಬೇಕು ಎಂಬುದಾಗಿದೆ. ಇಡೀ ವಿಧಾನ ಪ್ರಜ್ಞಾಪೂರ್ಣ ಸಮಾಜವನ್ನು (ಸುಪ್ರಜಾ ಜನನಮ್) ಸೃಷ್ಟಿ ಮಾಡುವುದನ್ನು ಕುರಿತಾಗಿದೆ, ಅಪ್ರಜ್ಞೆಯಿಂದ ಮಾನವ ಮೊತ್ತವನ್ನಲ್ಲ. ಈ ಅಸಾಧಾರಣ ಸೃಷ್ಟಿಗೆ ಬಹಳ ಭವ್ಯ ರೀತಿಯಲ್ಲಿರುವ ತಯಾರು ಬೇಕಾಗುತ್ತದೆ, ಮಕ್ಕಳು ಬೇಕೆಂದು ಅಭೀಪ್ಸೆ ಪಡುತ್ತಿರುವ ಪುರುಷರು ಹಾಗೂ ಸ್ತ್ರೀಯರು ಪ್ರಗತಿ ಸಾಧಿಸಬೇಕು, ಆಧ್ಯಾತ್ಮಿಕ ಬದಲಾವಣೆಗೆ ಒಳಗಾಗಬೇಕು, ಈ ಆಧ್ಯಾತ್ಮಿಕ ಬದಲಾವಣೆ ಎಂದರೇನು, ಅದನ್ನು ಹೇಗೆ ಸಿದ್ಧಿಸಿಕೊಳ್ಳಬೇಕು ಎಂಬ ಪ್ರಶ್ನೆಗಳಿಗೆ ಭವ್ಯ ಅವಕಾಶವಿದೆ, ಅಭ್ಯಾಸ ಮಾಡುವುದಿದೆ. ಶ್ರೀಮಾತೆಯವರ ಬರಹಗಳಿಂದ ಆಯ್ಕೆ ಮಾಡಿ ಸಂಗ್ರಹಿಸಿದ ಈ ಸಂಚಿಕೆಯಿಂದ ಮನುಷ್ಯ ಬಹಳಷ್ಟು ಅಂತರ್ದೃಷ್ಟಿಗಳನ್ನು ತಿಳಿದುಕೊಳ್ಳಬಹುದು.





## ಪುರುಷ ಮತ್ತು ಸ್ತ್ರೀ ಇವರನ್ನು ಕುರಿತು

### ಪುರುಷ ಮತ್ತು ಸ್ತ್ರೀ ಇವರ ನಡುವಿನ ಸಂಬಂಧ ಕುರಿತು

ಸ್ತ್ರೀಯ ಪಾತ್ರವನ್ನು ಕೇವಲ ಮನೆಯೊಳಗಿನ ಹಾಗೂ ಕುಟುಂಬದ ಕೆಲಸಗಳಿಗೆ ಹಾಗೂ ಪುರುಷನ ಪಾತ್ರವನ್ನು ಪ್ರತ್ಯೇಕವಾಗಿಸಿ ಬಾಹ್ಯ ಹಾಗೂ ಸಾಮಾಜಿಕ ಕಾರ್ಯಗಳಿಗೆ ಸೀಮಿತಗೊಳಿಸುವುದೆಂದರೆ, ಒಂದಾಗಿ ಬೆರೆಸಬೇಕಾದುದಲ್ಲವನ್ನು ಬೇರ್ಪಡಿಸಿದಂತಾಗುತ್ತದೆ, ಇಬ್ಬರೂ ಸಮನಾಗಿ ವೇದನೆ ಅನುಭವಿಸಬೇಕಾದ ಸದ್ಯದ ವಿಷಾದಕರ ಸ್ಥಿತಿಯನ್ನು ನಿರಂತರ–ಗೊಳಿಸಿದಂತಾಗುತ್ತದೆ, ಇದರಿಂದ ಇಬ್ಬರೂ ಸಮನಾಗಿ ವೇದನೆಗೊಳಗಾಗುತ್ತಾರೆ. ಹಿರಿದಾದ ಕರ್ತವ್ಯ ಮತ್ತು ಗುರುತರವಾದ ಹೊಣೆಗಾರಿಕೆಗಳನ್ನು

ಲಕ್ಷ್ಯದಲ್ಲಿರಿಸಿಕೊಂಡು ಅವರವರ ಗುಣಧರ್ಮಗಳನ್ನು ಆತ್ಮೀಯವಾಗಿ, ವಿಶ್ವಸನೀಯವಾಗಿ ಒಂದುಗೂಡಿಸಬೇಕಾಗುತ್ತದೆ.

ಒಂದು ಇನ್ನೊಂದರ ಜೊತೆಗೆ ಹೊಂದಾಣಿಕೆಯಾಗದ ವಿರೋಧೀ ಶಕ್ತಿಗಳೆಂದು ತೋರಿಬರುವ ಅಂಗ ಭೇದಗಳ ಮನೋಭಾವ ನಿಂತು ಹೋಗುವ ಕಾಲ ಸನ್ನಿಹಿತವಾಗಿಲ್ಲವೆ? ಕಠಿಣವಾದ ಹಾಗೂ ವೇದನಾಪೂರ್ಣವಾದ ಪಾಠವನ್ನು ದೇಶಗಳಿಗೆ ಕೊಡಲಾಗುತ್ತಿದೆ. ನಾಶವಾಗಿ, ಹೇರಳವಾಗಿ ಗುಡ್ಡೆಹಾಕಿದುದರ ಮೇಲೆ ಹೆಚ್ಚು ಸುಂದರವಾದ, ಹೆಚ್ಚು ಸಾಮರಸ್ಯವಿರುವ ಹೊಸ ರಚನೆಗಳನ್ನು ನಿರ್ಮಿಸಬಹುದು. ನಿರರ್ಥಕ ಸ್ಪರ್ಧೆಗಳಿಗೆ ಸ್ವಾರ್ಥ ಹಿತಾಸಕ್ತಿಗಳಿಗೆ ಇದು ಸಮಯವಲ್ಲ. ಎಲ್ಲ ಜೀವಿಗಳು, ಪುರುಷರು ಹಾಗೂ ಸ್ತ್ರೀಯರು ಪರಸ್ಪರ ಸಹಕಾರದಿಂದ ಒಟ್ಟಿಗೆ ಸೇರಿ ಹಿರಿದಾದ ಆದರ್ಶಕ್ಕೆ ಈ ಆದರ್ಶ ತನ್ನನ್ನು ಅರಿತುಕೊಳ್ಳಲೆಂದು ಬಯಸುತ್ತದೆ, ಈಗ ಪ್ರಯತ್ನ ಮಾಡಬೇಕಾಗಿದೆ, ಅದನ್ನು ಚೆನ್ನಾಗಿ ಅರಿತುಕೊಂಡು ಅದನ್ನು ಸಿದ್ಧಿಸಿಕೊಳ್ಳುವುದಕ್ಕಾಗಿ ಹುಮ್ಮಸ್ಸಿನಿಂದ ಕಾರ್ಯಮಾಡಬೇಕಾಗಿದೆ. ಪರಿಹರಿಸಬೇಕಾದ ನಿಜವಾದ ಪ್ರಶ್ನೆ ಎಂದರೆ ಕೇವಲ ಅವರ ಚಟುವಟಿಕೆಗಳನ್ನು ಹೆಚ್ಚು ಒಳ್ಳೆಯರೀತಿಯಲ್ಲಿ ಉಪಯೋಗ ಮಾಡುವುದಷ್ಟೇ ಅಲ್ಲ, ಆದರೆ ಎಲ್ಲದಕ್ಕಿಂತಲೂ ಹೆಚ್ಚಾಗಿ ಆಂತರಿಕ ಆಧ್ಯಾತ್ಮಿಕತೆಯನ್ನು ಕುರಿತಾದ ಪ್ರಶ್ನೆಯಿದೆ. ಆಂತರಿಕ ಪ್ರಗತಿ ಇಲ್ಲದೆ ಸಾಧ್ಯವಾಗಬಹುದಾದ ಬಾಹ್ಯ ಪ್ರಗತಿ ಇರುವುದಿಲ್ಲ.

ಹೀಗೆ ಸ್ತ್ರೀತ್ವದ ಸಮಸ್ಯೆ, ಜಗತ್ತಿನಲ್ಲಿ ಉಳಿದೆಲ್ಲ ಸಮಸ್ಯೆಗಳಿರುವ ಹಾಗೆ ಆಧ್ಯಾತ್ಮಿಕ ಸಮಸ್ಯೆಯತ್ತ ಬರುತ್ತದೆ. ಏಕೆಂದರೆ ಆಧ್ಯಾತ್ಮಿಕ ನೈಜತೆ ಉಳಿದೆಲ್ಲದರ ಆಧಾರವಾಗಿದೆ, ದೈವೀ ಜಗತ್ತು, ಬೌದ್ಧರ ಧಮ್ಮತಾ ಶಾಶ್ವತ ಆಧಾರವಾಗಿದೆ, ಅದರ ಮೇಲೆ ಎಲ್ಲ ಲೋಕಗಳನ್ನು ನಿರ್ಮಿಸಲಾಗಿದೆ. ಈ ಪರಮೋಚ್ಚ ಸತ್ಯದ ದೃಷ್ಟಿಯಲ್ಲಿ ಪುರುಷರು, ಸ್ತ್ರೀಯರು ಅವರವರ ಹಕ್ಕುಗಳಲ್ಲಿ ಕರ್ತವ್ಯಗಳಲ್ಲಿ ಈ ಪ್ರಾಂತದಲ್ಲಿ ಎಲ್ಲರೂ ಸಮಾನರು, ಅಸ್ತಿತ್ವದಲ್ಲಿ ಇರಬಹುದಾದ ಕೇವಲ ವ್ಯತ್ಯಾಸ ನಿಷ್ಕಪಟತೆ, ಅಭೀಪ್ಸೆಯ ಉತ್ಸಾಹಗಳ ಆಧಾರ, ಸಂಕಲ್ಪ ಸಂತತ ಇರುವಿಕೆ ಇವುಗಳ ಮೇಲಿರುತ್ತದೆ. ಈ ಮೂಲಭೂತ ಆಧ್ಯಾತ್ಮಿಕ ಸಮಾನತೆಯನ್ನು ಗುರುತಿಸಿದಾಗ ಮಾತ್ರ ಸ್ತ್ರೀ ಮತ್ತು ಪುರುಷ ಇವರ ನಡುವಿರುವ ಸಮಸ್ಯೆಗೆ ಗಂಭೀರವಾದ ಹಾಗೂ ಶಾಶ್ವತವಾದ ಪರಿಹಾರ ಕಂಡು ಹಿಡಿಯಲು ಸಾಧ್ಯ. ಈ



ಬೆಳಕಿನಲ್ಲಿ ಆ ಸಮಸ್ಯೆಯನ್ನಿರಿಸಿ ನೋಡಬೇಕು, ಮತ್ತು ಕ್ರಿಯೆಯ ಕೇಂದ್ರವನ್ನು ಅರಸಬೇಕು, ಅದರ ಸುತ್ತ ಮಾನವತೆಯ ಭವಿಷ್ಯದ ದೇಗುಲವನ್ನು ರಚಿಸಲಾಗುವುದು.

**(CWM, 2/49–50)** **– ಶ್ರೀಮಾತೆ**

*

ಪುರುಷರು ಪ್ರಾಣಿಕ ಹಾಗೂ ಭೌತಿಕ ಪ್ರಾಪಂಚಿಕ ಪ್ರಜ್ಞೆಗೆ ಕಟ್ಟುಬಿದ್ದಿರುವು–ದಕ್ಕಿಂತ ಹೆಚ್ಚಾಗಿ ಬೇರೆ ಯಾವುದಕ್ಕೂ ಸ್ತ್ರೀಯರು ಕಟ್ಟುಬಿದ್ದಿರುವುದಿಲ್ಲ, ತದ್ವಿರುದ್ಧವಾಗಿ, ಸರ್ವಸಾಧಾರಣ ರೀತಿಯಲ್ಲಿ ಅವರು ಪುರುಷರಷ್ಟು ಗರ್ವದ ಡಾಂಭಿಕ ನಡೆಯನ್ನು ರೂಢಿಸಿಕೊಂಡಿರುವುದಿಲ್ಲ. ಹಾಗಾಗಿ ಅವರು ತಮ್ಮ ಆತ್ಮಸತ್ತೆಯನ್ನು ಹುಡುಕಿಕೊಂಡು ಅದು ಅವರಿಗೆ ಮಾರ್ಗದರ್ಶನ ಮಾಡಲು ಅನುವು ಮಾಡಿಕೊಡುವುದು ಹೆಚ್ಚು ಸುಲಭವಾಗಿರುತ್ತದೆ.

ಸರ್ವಸಾಧಾರಣವಾಗಿ ಶಬ್ದಗಳಲ್ಲಿ ಅದನ್ನು ಉಚ್ಚರಿಸುವಷ್ಟು ಮಾನಸಿಕವಾಗಿ ಪ್ರಜ್ಞೆಯುಳ್ಳವರಾಗಿರುವುದಿಲ್ಲ, ಆದರೆ ಅವರ ಭಾವನೆಗಳಲ್ಲಿ ಪ್ರಜ್ಞೆಯುಳ್ಳವರಾಗಿರುತ್ತಾರೆ. ಅವರಲ್ಲಿ ಅತ್ಯಂತ ಒಳ್ಳೆಯರಾದವರು ತಮ್ಮ ಕ್ರಿಯೆಗಳಲ್ಲೂ ಹಾಗಿರುತ್ತಾರೆ.

**(CWM, 14/289)** **– ಶ್ರೀಮಾತೆ**

*

ಗರ್ವ ಮತ್ತು ಸೊಕ್ಕು ಯಾವಾಗಲೂ ಹಾಸ್ಯಾಸ್ಪದವಾಗಿರುತ್ತವೆ ಎಂಬುದನ್ನು ಮೊದಲು ಒಪ್ಪಿಕೊಳ್ಳೋಣ, ಕೇವಲ ಮೂರ್ಖ ಹಾಗೂ ಅಜ್ಞಾನಿಗಳಾದವರು ಹೆಚ್ಚು ಹಟವಾದಿಗಳಾಗಿರುತ್ತಾರೆ. ವಿಶ್ವವನ್ನು ಎಲ್ಲೆಡೆ ವ್ಯಾಪಿಸುವ ಹಾಗೆ ಸಾಕಷ್ಟು ನೋಡುವುದು ಪ್ರಜ್ಞೆಗೆ ಸ್ವಲ್ಪ ಸಾಧ್ಯವಾಗುವಂತೆ ಆದ ಕೂಡಲೆ ಅವನು ಅವಶ್ಯವಾಗಿ ನಮ್ರತೆಯುಳ್ಳವನಾಗುತ್ತಾನೆ.

ತಟಸ್ಥ ಧೋರಣೆ ಹೊಂದಿದ ಮಹಿಳೆ, ವಾಸ್ತವದಲ್ಲಿ, ಜಗತ್ತಿನಲ್ಲಿ ಪರಮೋಚ್ಚ ಕಾರ್ಯಕೈಕೊಳ್ಳುತ್ತಿರುವ ಪರಮೋಚ್ಚವನ್ನು ದೈವೀ ಸಾಮರ್ಥ್ಯ–ದಿಂದಾಗಿ ಪುರುಷನಲ್ಲಿರುವುದಕ್ಕಿಂತ ಹೆಚ್ಚಿನ ರೀತಿಯಲ್ಲಿ ಅಂತರ್ಬೋಧೆಯನ್ನು ಹೊಂದಿರುವುದರಿಂದ ಹೆಚ್ಚು ಸ್ವಾಭಾವಿಕವಾಗಿ ವಿನಮ್ರಳಾಗಿರುತ್ತಾಳೆ.

ಆದರೆ ಆವಶ್ಯಕತೆಯ ವಾಸ್ತವತೆಯ ಮೇಲೆ ಈ ವಿನಮ್ರತೆಗೆ ಆಧಾರ ನೀಡುವುದು ದೋಷಯುಕ್ತವಾಗಿರುತ್ತದೆ. ಪುರುಷನಿಗೆ ಸ್ತ್ರೀಯ ಆವಶ್ಯಕತೆ ಇರುವಷ್ಟೇ ಸ್ತ್ರೀಗೆ ಪುರುಷನ ಸ್ವಲ್ಪ ಕಡಿಮೆ ರೀತಿಯಲ್ಲಿ ಆವಶ್ಯಕತೆ ಇರುತ್ತದೆ, ನಿಖರವಾಗಿ ಹೇಳುವುದಾದರೆ ಪುರುಷ ಮತ್ತು ಮಹಿಳೆ ಇವರಲ್ಲಿ ಪರಸ್ಪರರ ಸಮಾನ ಆವಶ್ಯಕತೆ ಇರುತ್ತದೆ.

ಆದಾಗ್ಯೂ ಪ್ರಾಪಂಚಿಕ ಪ್ರಾಂತದಲ್ಲಿಯೂ ಕೂಡ ಪುರುಷರ ಮೇಲೆ ಅವಲಂಬಿಸಿದ ಸ್ತ್ರೀಯರು ಇರುತ್ತಾರೆ ಮತ್ತು ಅವರಿರುವ ಹಾಗೆ ಪ್ರಾಪಂಚಿಕವಾಗಿ ಸ್ತ್ರೀಯರ ಮೇಲೆ ಅವಲಂಬಿಸಿದ ಪುರುಷರು ಇರುತ್ತಾರೆ. ಪರಿಣಾಮವಾಗಿ ಆಗ ಪುರುಷರು ವಿನಮ್ರರಾಗಿರಬೇಕು, ಮತ್ತು ಸ್ತ್ರೀಯರಿಗೆ ಅಧಿಕಾರವಿರಬೇಕು.

ಅಲ್ಲದೆ ಮಹಿಳೆ ಹೆಚ್ಚು ವಿನಮ್ರಳಾಗಿದ್ದರೆ ಪುರುಷರಿಗೆ ಸಂತೋಷವಾಗುತ್ತದೆ – ಆದ್ದರಿಂದ ಅವಳು ವಿನಮ್ರಳಾಗಿರಬೇಕು ಎಂದು ಹೇಳುವುದಂತೂ ಶುದ್ಧ ಮೂರ್ಖತನ. ಇದರಿಂದ ಮಹಿಳೆ ಪೃಥ್ವಿಯ ಮೇಲೆ ಹುಟ್ಟಿದ್ದೇ ಪುರುಷನ ಸಂತೋಷಕ್ಕಾಗಿ ಎಂಬ ತಪ್ಪು ಕಲ್ಪನೆ ಬೆಳೆಯುವುದು. ಇದು ಶುದ್ಧ ಹುಚ್ಚುತನ.

ದೈವೀಶಕ್ತಿಯನ್ನು ಪ್ರಕಟಿಸಲೆಂದೇ ಇಡೀ ವಿಶ್ವವನ್ನು ಸೃಷ್ಟಿಸಲಾಗಿದೆ. ಮಾನವ ಜೀವಿಗಳಿಗೆ, ಅವರು ಪುರುಷರೇ ಇರಲಿ, ಸ್ತ್ರೀಯರೇ ಇರಲಿ, ವಿಶೇಷ ಮಣಿಹವೊಂದಕ್ಕಾಗಿ ದೈವೀ ಸತ್ವವೊಂದನ್ನು ಅರಿತುಕೊಂಡು ಆ ಶಾಶ್ವತ ದೈವೀಸತ್ಯವನ್ನು ಪ್ರಕಟಿಸಬೇಕಾಗಿದೆ. ಅವರ ಮುಖ್ಯ ಉದ್ದೇಶ ಅದೊಂದೇ ಆಗಿರಬೇಕು ಬೇರೇನೂ ಆಗಿರಬಾರದು. ಇದನ್ನು ಅವರು ತಿಳಿದುಕೊಂಡಿದ್ದೇ ಆದರೆ, ಮೇಲಿಂದ ಮೇಲೆ ನೆನಪಿಗೆ ತಂದುಕೊಳ್ಳುತ್ತಲೇ ಇದ್ದರೆ ಪುರುಷರು ಹಾಗೂ ಸ್ತ್ರೀಯರು ತಾವು ಹೆಚ್ಚಿನವರು, ತಮಗೆ ಹೆಚ್ಚಿನ ಪ್ರಾಶಸ್ತ್ಯ ಬೇಕು ಮುಂತಾಗಿ ಜಗಳಾಡುವ ಪ್ರಸಂಗ ಬರುವುದಿಲ್ಲ. ಮತ್ತೊಬ್ಬರಿಗೆ ಸೇವೆ ಸಲ್ಲಿಸುವುದಕ್ಕಿಂತ ಅವರಿಂದ ಸೇವೆ ಪಡೆಯುವುದು ಹೆಚ್ಚಿನ ಗೌರವ ಎಂದು ಅವರಿಗೆ ಎನಿಸುವುದಿಲ್ಲ, ಏಕೆಂದರೆ ತಾವೆಲ್ಲರೂ ಭಗವಂತನ ಸೇವಕರು, ಸಮಾನರೆಂದು ಭಾವನೆ ತಂದುಕೊಳ್ಳುವರು. ಆಗ ಇನ್ನೂ ಹೆಚ್ಚು ಹೆಚ್ಚಾಗಿ, ಇನ್ನೂ ಹೆಚ್ಚು ಒಳ್ಳೆಯ ರೀತಿಯಲ್ಲಿ ಸೇವೆಸಲ್ಲಿಸುವುದು ಅವರಿಗೆ ಗೌರವ ತಂದುಕೊಡುವಂತೆ ಮಾಡುವುದು.

**(CWM, 2/151)** **– ಶ್ರೀಮಾತೆ**

*



**ಪ್ರಶ್ನೆ:** *ಮಧುರ ಮಾತೆಯವರೆ, ಪುರುಷನಿಗೆ ಸ್ತ್ರೀಯ ಬಗ್ಗೆ ಹಾಗೂ ಸ್ತ್ರೀಗೆ ಪುರುಷನ ಬಗ್ಗೆ ಅನುಕಂಪ ಹಾಗೂ ಆಕರ್ಷಣೆ ಇವುಗಳ ಹಿಂದೆ ಇರುವ ನಿತ್ಯಸತ್ಯವೇನು?*

**ಶ್ರೀಮಾತೆ:** ಅದು ಪುರುಷ ಹಾಗೂ ಪ್ರಕೃತಿ ಇವರ ನಡುವೆ ಇರುವ ಸಂಬಂಧ.

ಈ ವಿಷಯ ಕುರಿತು ಶ್ರೀ ಅರವಿಂದರು ಏನು ಬರೆದಿದ್ದಾರೆ ಎಂಬುದನ್ನು ನೀವು ಓದಬೇಕು.

**ಮೂರು ದಾಸ್ಯಗಳಿಂದ ಮುಕ್ತಿ**

ಸ್ತ್ರೀಯರು ತಮ್ಮನ್ನು ತಾವೇ ಮುಕ್ತಗೊಳಿಸಿಕೊಳ್ಳದ ಹೊರತು ಯಾವ ಕಾನೂನೂ ಅವರನ್ನು ಮುಕ್ತಗೊಳಿಸಲಾರದು.

ಅವರನ್ನು ದಾಸ್ಯಕ್ಕೊಳಪಡಿಸುವ ವಿಷಯಗಳೆಂದರೆ:

1. ಪುರುಷನತ್ತ ಹಾಗೂ ಅವನ ಬಲದತ್ತ ಆಕರ್ಷಣೆ,
2. ಕೌಟುಂಬಿಕ ಜೀವನಕ್ಕಾಗಿ ಹಾಗೂ ಅದು ಒದಗಿಸುವ ರಕ್ಷಣೆ
3. ಮಾತೃತ್ವದ ಬಗ್ಗೆ ಇರುವ ಮೋಹ.

ಈ ಮೂರು ದಾಸ್ಯಗಳಿಂದ ಅವರು ಬಿಡುಗಡೆ ಹೊಂದಿದರೆ ಅವರು ಈ ವಿಷಯದಲ್ಲಿ ಪುರುಷರಿಗೆ ಸರಿಸಮಾನರಾಗುವರು.

ಪುರುಷರಿಗೂ ಮೂರು ದಾಸ್ಯಗಳಿವೆ.

1. ಸ್ವಾಧೀನಪಡಿಸಿಕೊಳ್ಳುವಿಕೆಯ ಮನೋಭಾವ, ಅಧಿಕಾರ ಹಾಗೂ ಅಧಿಕಾರ ಚಲಾಯಿಸುವಿಕೆ ಇವುಗಳ ಬಗೆಗಿರುವ ಮೋಹ.
2. ಸ್ತ್ರೀಯ ಜೊತೆಗೆ ಲೈಂಗಿಕ ಸಂಬಂಧದ ಆಸೆ.
3. ವೈವಾಹಿಕ ಜೀವನದ ಚಿಕ್ಕಪುಟ್ಟ ಸುಖ–ಸೌಲಭ್ಯಕ್ಕಾಗಿ ಇರುವ ಮೋಹ.

ಈ ಮೂರು ದಾಸ್ಯಗಳಿಂದ ಅವರು ಮುಕ್ತರಾದರೆ ಈ ವಿಷಯ ಕುರಿತು ಈ ವಿಷಯದಲ್ಲಿ ಮಹಿಳೆಯರಿಗೆ ಸರಿ ಸಮಾನರಾಗುತ್ತಾರೆ.

**(CWM, 14/289)** **– ಶ್ರೀಮಾತೆ**

*

**ಯಾವುದು ಪ್ರೇಮವಲ್ಲ**

ಪ್ರೇಮವೆಂದರೆ ಲೈಂಗಿಕ ಕ್ರಿಯೆ ಅಲ್ಲ.
ಪ್ರಾಣಿಕ ಆಕರ್ಷಣೆ ಹಾಗೂ ಅದರ ವಿನಿಮಯ ಮಾಡಿಕೋ
ಪ್ರೀತಿಗಾಗಿ ಇರುವ ಹೃದಯದ ಹಸಿವೂ ಪ್ರೇಮವಲ್ಲ.
ಪ್ರೇಮ ಅಧಿಕಬಲವಿರುವ ಸ್ಪಂದನವಾಗಿದ್ದು ನೇರವಾಗಿ
ಏಕಮಾದ್ವಿತೀಯನಿಂದ ಬರುವಂತಹದು,
ಅದನ್ನು ಏಕೈಕರಾಗಿರುವವರು, ಬಹಳ ಪರಿಶುದ್ಧರಾದವರು,
ಶಕ್ತಿಯುತರಾದವರು ಮಾತ್ರ ಸ್ವೀಕರಿಸಲು ಹಾಗೂ ಪ್ರಕಟಿಸಲು
ಕ್ಷಮತೆಯುಳ್ಳವರಾಗಿರುತ್ತಾರೆ

*

**ಮದುವೆ ಮತ್ತು ದೀರ್ಘಕಾಲ ಉಳಿದುಕೊಳ್ಳುವ ಏಕತೆಯ ರಹಸ್ಯ**

ನಿಮ್ಮ ಭೌತಿಕ ಜೀವನಗಳನ್ನು, ಭೌತಿಕ ಹಿತಾಸಕ್ತಿಗಳನ್ನು ಒಂದಾಗುವಂತೆ ಬೆರೆಸುವುದನ್ನು, ನಿಮ್ಮ ಜೀವನದ ಸೋಲುಗಳನ್ನು, ಗೆಲವುಗಳನ್ನು, ತೊಂದರೆಗಳನ್ನು, ವಿಜಯಗಳನ್ನು ಪರಸ್ಪರ ಸೇರಿಕೊಂಡು ಎದುರಿಸಲು ಪಾಲುದಾರರಾಗುವುದು, ಮದುವೆಯಾಗುವುದರ ತಳಹದಿಯಾಗಿರುತ್ತದೆ, ಆದರೆ ನಿಮಗೀಗಾಲೆ ತಿಳಿದಿರುವಂತೆ ಇದಿಷ್ಟೇ ಸಾಕಾಗುವುದಿಲ್ಲ.

ನಿಮ್ಮ ಸಂವೇದನೆಗಳಲ್ಲಿ ಏಕವಾಗಿರುವುದು, ಒಂದೇ ಬಗೆಯ ಸೌಂದರ್ಯಾಭಿರುಚಿ ಹಾಗೂ ಸಂತೋಷಗಳಿರಬೇಕು, ಅದೇ ವಿಷಯಗಳ ಮೂಲಕ ಸಮಾನರಾಗಿ ಪ್ರತಿಸ್ಪಂದಿಸಬೇಕು, ಪರಸ್ಪರರು ಪರಸ್ಪರರ ಮೂಲಕ, ಒಬ್ಬರು ಇನ್ನೊಬ್ಬರಿಗಾಗಿ– ಅದು ಒಳ್ಳೆಯದು, ಅದು ಅವಶ್ಯವಾದದ್ದು, ಆದರೆ ಅದಿಷ್ಟೇ ಸಾಕಾಗುವುದಿಲ್ಲ.

ನಿಮ್ಮ ಆಳಾತಿಆಳದ ಅನಿಸಿಕೆಗಳಲ್ಲಿ ಏಕವಾಗಿರಬೇಕು, ಪರಸ್ಪರರ ಪ್ರೀತಿ, ಮಾರ್ದವತೆ ಇವುಗಳನ್ನು ಕಾಪಾಡಿಕೊಂಡು ಬರಬೇಕು, ಜೀವನದಲ್ಲಿ ಏನೆಲ್ಲ ಆಕಸ್ಮಿಕಗಳು ಘಟಿಸದಾಗ್ಯೂ ಅದು ಬದಲಾಗಬಾರದು, ಎಲ್ಲ ರೀತಿಯ ಬಳಲಿಕೆ, ಬೇಸರ, ವ್ಯಗ್ರತೆ, ನಿರಾಶೆಗಳನ್ನು ಸಹಿಸಿಕೊಳ್ಳಬೇಕು, ಸದಾ ಹಾಗೂ ಎಲ್ಲ ಕಾಲದಲ್ಲೂ ಸಂತೋಷದಿಂದಿರಬೇಕು, ಅತ್ಯಾನಂದದಿಂದ ಒಟ್ಟಿಗೆ ಇರಬೇಕು,



ಪ್ರತಿಯೊಂದು ಸನ್ನಿವೇಶದಲ್ಲಿ ಪ್ರಶಾಂತತೆಯನ್ನು ಪರಸ್ಪರರಲ್ಲಿ ಶಾಂತಿ, ಸಂತೋಷಗಳನ್ನು ಕಂಡುಕೊಳ್ಳಬೇಕು– ಇದು ಬಹಳ ಒಳ್ಳೆಯದು, ಅನಿವಾರ್ಯವಾದದ್ದೂ ಕೂಡ, ಆದರೆ ಅದಷ್ಟೇ ಸಾಕಾಗದು.

ನಿಮ್ಮ ಮನಸ್ಸುಗಳು ಒಂದಾಗಿರುವಂತೆ ಬೆರೆಸಬೇಕು, ನಿಮ್ಮ ಯೋಚನೆಗಳಲ್ಲಿ ಸಾಮರಸ್ಯವಿರಬೇಕು, ಅವು ಪರಸ್ಪರ ಪೂರಕವಾಗಿರಬೇಕು, ನಿಮ್ಮ ಬೌದ್ಧಿಕ ಪೂರ್ವ ಗ್ರಹಿಕೆಗಳನ್ನು, ಶೋಧನೆಗಳನ್ನು ಪರಸ್ಪರರಲ್ಲಿ ಹಂಚಿಕೊಳ್ಳಬೇಕು, ಸ್ವಲ್ಪದರಲ್ಲಿ ಹೇಳುವುದಾದರೆ ನಿಮ್ಮ ಮಾನಸಿಕ ಕ್ರಿಯಾಕ್ಷೇತ್ರವನ್ನು ಇಬ್ಬರೂ ಸೇರಿ ಒಮ್ಮೆಗೆ ದೊರಕಿಸುವುದರಿಂದ ವಿಶಾಲಗೊಳಿಸುವುದರ ಮೂಲಕ, ಶ್ರೀಮಂತ–ಗೊಳಿಸುವುದರ ಮೂಲಕ ಏಕರೂಪದ್ದಾಗುವಂತೆ ಮಾಡಬೇಕು – ಅದು ಒಳ್ಳೆಯದು, ಸಂಪೂರ್ಣವಾಗಿ ಅವಶ್ಯವಾದದ್ದು, ಆದರೆ ಅದಷ್ಟೇ ಸಾಕಾಗದು.

ಇವೆಲ್ಲವುಗಳಿಗಿಂತ ಹೆಚ್ಚಾಗಿ ಆಳದಲ್ಲಿ, ಕೇಂದ್ರದಲ್ಲಿ, ನಿಮ್ಮ ಸತ್ತೆಯ ಅತ್ಯುನ್ನತ ಶಿಖರದಲ್ಲಿ ಸತ್ತೆಯ ಪರಮೋಚ್ಚ ಸತ್ಯ ಪ್ರತಿಷ್ಠಿತವಾಗಿರುತ್ತದೆ, ಶಾಶ್ವತವಾದ ಪ್ರಕಾಶ ವ್ಯಾಪಿಸಿಕೊಂಡಿರುತ್ತದೆ– ಅದು ಜನನದ ಸನ್ನಿವೇಶಗಳಿಗೆ, ಯಾವುದೇ ದೇಶ, ಪರಿಸ್ಥಿತಿ, ಪರಿಸರ ಶಿಕ್ಷಣ ಇವುಗಳಿಗೆ ಸಂಬಂಧಿಸಿರುವುದಿಲ್ಲ. ಅದೇ ಮೂಲ, ಅದೇ ನಮ್ಮ ಆಧ್ಯಾತ್ಮಿಕ ಬೆಳವಣಿಗೆಗೆ ಕಾರಣ ಮತ್ತು ಪ್ರಭು, ಅದೇ ನಮ್ಮ ಜೀವನಕ್ಕೆ ನಿರ್ದೇಶನವನ್ನು ಶಾಶ್ವತವಾಗಿ ನೀಡುವುದು– ನಮ್ಮ ಅದೃಷ್ಟವನ್ನು, ಭಾಗ್ಯವನ್ನು ನಿರ್ಣಯಿಸುವುದು ಆ 'ತತ್' ಚೇತನದಲ್ಲಿ ನೀವು ಪರಸ್ಪರ ಬೆರೆಯಬೇಕು, ಅಭೀಪ್ಸೆಯಲ್ಲೂ, ಆರೋಹಣದಲ್ಲೂ ಒಂದುಗೂಡಿರಬೇಕು, ಒಂದೇ ಗತಿಯಲ್ಲಿ ಮುಂದುವರಿದುಕೊಂಡು ಹೋಗಬೇಕು, ಒಂದೇ ಆಧ್ಯಾತ್ಮಿಕ ಮಾರ್ಗದಲ್ಲಿ ಸಾಗಿ ಹೋಗಬೇಕು, ಅದು ದೀರ್ಘಕಾಲ ಉಳಿದುಕೊಳ್ಳುವಿಕೆಯ ರಹಸ್ಯವಾಗಿರುತ್ತದೆ.

**(CWM, 13/236–37)** **– ಶ್ರೀಮಾತೆ**

*

**ಪ್ರಶ್ನೆ:** *ಆಧುನಿಕ ಮಹಿಳೆಯ ಆದರ್ಶ ಸಾಮಾನ್ಯ ಜೀವನದಲ್ಲಿ ಏನಾಗಿರಬೇಕು?*

**ಶ್ರೀಮಾತೆ:** ಸಾಮಾನ್ಯ ಜೀವನದಲ್ಲಿ ಮಹಿಳೆಯರು ತಮಗಿಷ್ಟವಾಗಿರುವ ಎಲ್ಲ ವಿಚಾರಗಳನ್ನು ಹೊಂದಿರಬಹುದು, ಅದು ಬಹಳ ಮಹತ್ವದ್ದಾಗಿರುವುದಿಲ್ಲ.

ಆಧ್ಯಾತ್ಮಿಕ ದೃಷ್ಟಿಕೋನದಿಂದ ಪುರುಷರು ಹಾಗೂ ಮಹಿಳೆಯರು ಭಗವಂತನನ್ನು ಸಿದ್ಧಿಸಿಕೊಳ್ಳಲು ಸಮಾನ ಕ್ಷಮತೆಯನ್ನು ಹೊಂದಿರುತ್ತಾರೆ. ಪ್ರತಿಯೊಬ್ಬರು ಅವನ (ಅವಳ)ದೇ ರೀತಿಯಲ್ಲಿ ಹಾಗೆ ಮಾಡಬೇಕು ಹಾಗೂ ಅವನ (ಅವಳ) ಸಾಧ್ಯತೆಗಳಿಗೆ ಅನುಸಾರವಾಗಿ.

**(CWM, 10/299–300)** **– ಶ್ರೀಮಾತೆ**

*



## ಅಭೀಪ್ಸೆ ಮತ್ತು ಸಿದ್ಧತೆ

**ತಾಯಿಯೋರ್ವಳ ಮನೋಭಿಲಾಷೆಯ ಮಹತ್ವ, ಅವಳ ಚಿಂತನಗಳು ಹಾಗೂ ಅವಳ ಭಾವನೆಗಳು, ಅವಳ ಉದಾತ್ತ ವೈಚಾರಿಕತೆ, ಅವಳ ಸಂಕಲ್ಪ ಮತ್ತು ಅವಳ ಸುತ್ತಲೂ ಇರುವ ಭೌತಿಕ ವಾತಾವರಣದ ಮಹತ್ವ.**

ಜನನಗೊಳ್ಳುತ್ತಿರುವ ಶಿಶುವಿನ ಸ್ವಭಾವವು ಬಹುತೇಕವಾಗಿ ಅಂತಹ ಶಿಶುವನ್ನು ಪಡೆಯುತ್ತಿರುವ ತಾಯಿಯ ಸ್ವಭಾವವನ್ನೇ ಅವಲಂಬಿಸಿರುತ್ತದೆ ಎನ್ನುವದು ಸರ್ವೇ ಸಾಮಾನ್ಯವಾದ ವಿಷಯವಾಗಿದೆ, ಅಲ್ಲದೇ ಅವಳ ಅಭೀಪ್ಸೆ ಮತ್ತು ಸಂಕಲ್ಪ ಜೊತೆಜೊತೆಗೆ ಅವಳು ವಾಸಿಸುತ್ತಿರುವ ಲೌಕಿಕ ವಾತಾವರಣದ ಮೇಲೆ ಅವಲಂಬಿತವಾಗಿರುತ್ತದೆ. ಹೀಗಾಗಿ ಅವಳ ಆಲೋಚನೆಗಳು ಸದಾ ಪರಿಶುದ್ಧಮಯವಾಗಿಯೇ ಇರಬೇಕು ಮತ್ತು ಉದಾತ್ತತೆಯಿಂದ ಕೂಡಿರಬೇಕು. ಅವಳು ವಾಸಿಸುತ್ತಿರುವ ಲೌಕಿಕ ವಾತಾವರಣವೂ ಸಹಿತ ಸರಳವಾಗಿ ಸಾಧ್ಯವಿದ್ದಷ್ಟು ಸಾಮರಸ್ಯದಿಂದ ಕೂಡಿರಬೇಕು– ಇದು ತಾಯಿಯಾಗುತ್ತಿರುವವಳು ಸ್ವತಃ ತಾನೇ ಈ ವಿಷಯವಾಗಿ ತನ್ನನ್ನು ರೂಪಿಸಿಕೊಳ್ಳುವಂತಹ ಶಿಕ್ಷಣದ ವ್ಯವಸ್ಥೆಯಲ್ಲಿ ಇರಬೇಕು. ಇದರ ಜೊತೆಜೊತೆಗೆ ಅವಳು ಪ್ರಜ್ಞಾಪೂರ್ವಕವಾಗಿ ಮತ್ತು ಖಚಿತವಾಗಿಯೇ ಉದಾತ್ತ ಮತ್ತು ಆದರ್ಶಪ್ರಾಯವಾದ ಮಗುವನ್ನು ಹೊಂದಲು ಬಯಕೆಯನ್ನು ಹೊಂದಿದಲ್ಲಿ, ಮತ್ತು ಅಂತಹ ಎಲ್ಲ ವಾತಾವರಣವೂ ಪ್ರಾಪ್ತವಾದಲ್ಲಿ, ಆಗ ಮಗುವು ಖಂಡಿತವಾಗಿಯೂ ಈ ಜಗತ್ತಿಗೆ ಸರ್ವಶಕ್ತನಾಗುವ ಎಲ್ಲ ಅಂಶಗಳನ್ನೂ ಪಡೆದುಕೊಂಡೇ ಜನಿಸುತ್ತದೆ.



**(CWM, 12/9)** **– ಶ್ರೀಮಾತೆ**

*

*ಮಗುವಿನ ಶಿಕ್ಷಣ ಯಾವಾಗಿನಿಂದ ಪ್ರಾರಂಭವಾಗುತ್ತದೆ?*

ಮಾನವನ ಶಿಕ್ಷಣವು ಅವನ ಜನನದಿಂದಲೇ ಪ್ರಾರಂಭಗೊಂಡು ಅವನ ಜೀವನಪರ್ಯಂತವೂ ಮುಂದುವರೆಯುತ್ತದೆ. ಆದಾಗ್ಯೂ, ಈ ರೀತಿಯ ಶಿಕ್ಷಣವು ಮಹಾನ್ ಫಲಿತಾಂಶವನ್ನು ಕೊಡಬೇಕೆಂದರೆ, ಇಂತಹ ಶಿಕ್ಷಣವನ್ನು ಮಗುವಿನ ಜನನಕ್ಕಿಂತ ಪೂರ್ವದಲ್ಲಿಯೇ ಪ್ರಾರಂಭಿಸಬೇಕಾಗುತ್ತದೆ; ಈ ಸಂದರ್ಭದಲ್ಲಿ ತಾಯಿಯಾಗುವವಳು ಸ್ವಯಂ ತಾನೇ ಈ ತೆರನಾದ ಶಿಕ್ಷಣದ ವ್ಯವಸ್ಥೆಯಲ್ಲಿ– ಎರಡು ಆಯಾಮದ ವ್ಯವಸ್ಥೆಯಲ್ಲಿ ಮುಂದುವರೆಯಬೇಕಾತ್ತದೆ. ಇದರಲ್ಲಿ ಮೊದಲನೇಯದಾಗಿ, ಅವಳ ಸ್ವಯಂ ವಿಕಸನದ್ದು, ಮತ್ತು ಎರಡನೇಯದಾಗಿ, ತಾನು ಗರ್ಭದಲ್ಲಿ ರೂಪಿಸುತ್ತಿರುವ ಮಗುವಿನ ಸರ್ವಾಂಗೀಣ ಬೆಳವಣಿಗೆಯನ್ನು ಕುರಿತಾಗಿರುತ್ತವೆ.

**(CWM, 12/9)** **– ಶ್ರೀಮಾತೆ**

*

**ಪೂರ್ವಭಾವಿಯಾಗಿ ಸ್ವಯಂಪೂರ್ಣವಾಗಿ ಸಿದ್ಧವಾಗಲು; ತಲ್ಲೀನತೆಯ, ಧ್ಯಾನಸ್ಥ ಮನೋಭಾವದ ಮತ್ತು ಅಭಿಪ್ಸೆಯಲ್ಲಿ; ಗರ್ಭಾಧಾರಣೆ ಅವಧಿಯಲ್ಲಿ ಚಿತ್ತದ ಸ್ಥಿತಿ.**

*ಓ ಮಾತೆಯೇ, ತಂದೆ ಮತ್ತು ತಾಯಿಯವರ ಆತ್ಮಾಭಿಲಾಷೆಯ ಪ್ರಕಾರವೇ ಮಗುವೊಂದನ್ನು ಪಡೆಯಲು ಸಾಧ್ಯತೆಗಳು ಇವೆಯೇ..?*

ಕೇಳಲೇಬೇಕೆ? ಅಂತಹ ಮಗುವನ್ನು ಪಡೆಯಲು ಅವರು ಒಂದು ಗೂಢ–ಜ್ಞಾನವನ್ನು ಹೊಂದಿರಬೇಕಾಗುತ್ತದೆ. ಸಾಮಾನ್ಯವಾಗಿ ಅಂತಹ ಜ್ಞಾನವನ್ನು ಅವರು ಹೊಂದಿರುವದಿಲ್ಲ. ಆದಾಗ್ಯೂ ಸಹಿತವಾಗಿ, ಇಲ್ಲಿರುವ ಸಾಧ್ಯತೆ ಎಂದರೆ ಬಹುತೇಕವಾಗಿ ತಮ್ಮ ಬಯಕೆ ಹಾಗೂ ಆಶಯಗಳನ್ನು ಕೇವಲ ಪ್ರಾಣಿಸದೃಶವಾದ ರೀತಿಯಲ್ಲಿಯೇ ಪಡೆದುಕೊಳ್ಳುತ್ತಿರುವದನ್ನು ಬಿಟ್ಟು, ಅಂತಹ ಯಾವುದೇ ಆಶಯಗಳು ಇಲ್ಲದೇ, ಅಭೀಪ್ಸೆಯ ಉತ್ಕಟತೆಯಲ್ಲಿ ಮತ್ತು ಸದಾ ಅದಕ್ಕಾಗಿ ಪ್ರಾರ್ಥನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಲ್ಲಿ, ಆಗ ಯಾವ ಆತ್ಮವು ದೇಹಧಾರಣೆ ಮಾಡಿಕೊಂಡು ಬರಲು ತವಕಿಸುತ್ತಿರುತ್ತದೆಯೋ ಅಂತಹ ಆತ್ಮಕ್ಕೆ ದೇಹರೂಪವೊಂದನ್ನು ಒದಗಿಸಿಕೊಡುವ ಮತ್ತು ಅವತಾರಗೊಂಡು ಇಲ್ಲಿ ಅವತರಣಗೊಳ್ಳಲು ಸಿದ್ಧರಾಗಬೇಕಾಗುತ್ತದೆ. ನನಗೆ ಕೆಲವು ವ್ಯಕ್ತಿಗಳ ಪರಿಚಯವಿದೆ ಹಾಗೆಂದು ಅವರ ಸಂಖ್ಯೆ ಬಹಳವಾಗಿಯೇನೂ ಇಲ್ಲ, ಅದೂ ಅಲ್ಲದೇ ಇದು ಪದೆಪದೇ ಘಟಿಸುವಂತಹ ಘಟನೆಯೂ ಅಲ್ಲ, ಆದರೂ ನನಗೆ ತಿಳಿದಿರುವಂತೆ, ಕೆಲವರು ಇಂತಹ ವಿಶೇಷ ಸಂದರ್ಭಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ, ಅದಕ್ಕಾಗಿ ಅವರು ಏಕಾಗ್ರತೆ ಮತ್ತು ಧ್ಯಾನ ಮತ್ತು ಅಭೀಪ್ಸೆಯ ಜೊತೆಗೆ, ಅಂತಹ ವಿಶೇಷ ಚೇತನದ, ಅಪರೂಪದ ಆತ್ಮವೊಂದನ್ನು ದೇಹಧಾರಣೆಗೊಳಿಸಿ ಇಲ್ಲಿ ಅವತರಣಗೊಳಿಸಲು ತವಕದಲ್ಲಿರುತ್ತಾರೆ.

**(CWM, 8/200)** **– ಶ್ರೀಮಾತೆ**

*

"... ಇಂತಹ ಗರ್ಭಧಾರಣೆಯು, ಯಾವುದೇ ವಾಂಛೆಗಳು ಇಲ್ಲದ ಸ್ಥಿತಿಯಲ್ಲಿ ಘಟಿಸಬೇಕಾಗುತ್ತದೆ. ಇಂತಹ ಘಟನೆಯೊಂದು ಘಟಿಸುವದು ಮತ್ತು ಫಲಪ್ರದವಾಗುವದು ತುಂಬ ದುಸ್ತರದ ಸಂಗತಿಯಾಗಿರುತ್ತದೆ."

**ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ ಎಪ್ರಿಲ 19, 1967**

*



**ಗರ್ಭಧಾರಣೆಯ ಸಂದರ್ಭದಲ್ಲಿ ತಂದೆ–ತಾಯಿಯ ಚಿತ್ತದ ಸ್ಥಿತಿಯು, ಆ ಮಗುವಿನ ಜೀವಮಾನದುದ್ದಕ್ಕೂ ತನ್ನ ಪ್ರಭಾವವನ್ನು ಬೀರುತ್ತದೆ.**

*ಕೆಲವು ಮಕ್ಕಳು ದುರಾಚಾರಿಗಳಾಗಿರುತ್ತಾರೆ. ಇದು ಅವರ ತಂದೆ–ತಾಯಿಯವರ ಅಭೀಪ್ಸೆಯಾಗಿರುವದಿಲ್ಲವೇ?*

ಇದು ತಂದೆ–ತಾಯಿಯಲ್ಲಿ ಅವಚೇತನದಲ್ಲಿರಬಹುದಾದ ದುರಾತ್ಮಕ ಚಿತ್ತದಿಂದ ಘಟಿಸುತ್ತದೆ. ಜನಸಮುದಾಯ ತಮ್ಮ ತಮ್ಮ ದುರಾತ್ಮಕತೆಯನ್ನು ತಮ್ಮಷ್ಟಕ್ಕೆ ತಾವೇ ತಮ್ಮ ಮಕ್ಕಳ ಮೂಲಕ ಪ್ರಕಟಗೊಳಿಸಿಕೊಳ್ಳುತ್ತಾರೆ. ಪ್ರತಿಯೊಬ್ಬನೂ ತನ್ನದೇ ನೆರಳಲ್ಲಿ ತನ್ನ ಸ್ವಂತಿಕೆಯನ್ನು ಹೊಂದಿರುತ್ತಾನೆ. ಆದರೆ ಕೆಲವರು ಇದನ್ನು ಬಾಹ್ಯದಲ್ಲಿ ಯೋಜಿಸಿಕೊಳ್ಳಲು ನೋಡುತ್ತಾರೆ– ಆದರೆ ಅಂತಹ ಘಟನೆ ಅದು ಈ ಪ್ರಭಾವದಿಂದ ಮುಕ್ತವಾಗಿರಲಾರದು, ಆದಾಗ್ಯೂ ಅದರಲ್ಲಿಯೇ ಅವರಿಗೆ ಸಮಾಧಾನ ಕೊಡುತ್ತದೆ! ಆದರೆ ಇದರಿಂದ ಮಗುವಿಗೆ ಎಂತಹ ಲಾಭ, ನಿನಗೆ ಗೊತ್ತಿದೆಯೇ? ತಂದೆ–ತಾಯಿ ಆ ಸಂದರ್ಭದಲ್ಲಿ ಯಾವ ಚಿತ್ತದ ಸ್ಥಿತಿಯಲ್ಲಿ ಇದ್ದರು ಎನ್ನುವದು ಇಲ್ಲಿ ಅತೀ ಪ್ರಮುಖವಾಗಿರುತ್ತದೆ. ಒಂದು ವೇಳೆ ಅವರು ಅತ್ಯಂತ ಕ್ಷುಲ್ಲಕ ಮತ್ತು ಅಧಮ ವಿಚಾರಗಳಲ್ಲಿ ಮಗ್ನರಾಗಿದ್ದರೆ, ಅಂತಹ ಸಂದರ್ಭದಲ್ಲಿ ಜನಿಸಿದ ಮಗುವೂ ಕೂಡ ಖಂಡಿತವಾಗಿಯೂ ಕೆಲವೊಂದು ಅಂತಹದೇ ಅಂಶಗಳನ್ನು ಪ್ರತಿಫಲಿಸುತ್ತದೆ. ಮತ್ತು ಈ ರೀತಿಯಾಗಿ ಸೂಕ್ತವಲ್ಲದ–ರೀತಿಯಲ್ಲಿ, ನಿಷೇಧಿತ ಧಾರಣೆಗಳಲ್ಲಿ. ಅಪರಿಪೂರ್ಣತೆಯಲ್ಲಿ (ಇಲ್ಲಿ ವಿಶೇಷವಾಗಿ ಪ್ರಜ್ಞೆಯ ವಿಷಯದಲ್ಲಿ, ಮತ್ತು ಕೆಲವೊಂದು ಅಂಶಗಳಲ್ಲಿ ವಿಕಲವಾಗಿ, ಪರಿಪೂರ್ಣವಲ್ಲದ ಸ್ಥಿತಿಯಲ್ಲಿ) ಜನಿಸಲ್ಪಟ್ಟಂತಹ ಶಿಶುಗಳು, ಯಾವಾಗಲೂ ಅರೆಪ್ರಜ್ಞಾವಸ್ಥೆಯ ಮತ್ತು ಅರೆ–ಬರೆ ರೂಪಧಾರಣೆಗೊಂಡ ರೀತಿಯಲ್ಲಿಯೇ ಇರಬೇಕಾಗುತ್ತದೆ. ಇದೆಲ್ಲಕ್ಕೂ ಮೂಲ ಕಾರಣವೆಂದರೆ, ಆ ಮಗುವಿನ ತಂದೆ–ತಾಯಿ ಯಾವ ಹಂತದ ಚಿತ್ತದಲ್ಲಿ ಮಗುವನ್ನು ಪಡೆಯಲು ಯತ್ನಿಸಿದರೊ, ಅದನ್ನೇ ಅವಲಂಬಿಸಿರುತ್ತದೆ. ಅದೇ ರೀತಿಯಲ್ಲಿ, ವ್ಯಕ್ತಿಯ ಅಂತಿಮ ಘಳಿಗೆಯಲ್ಲಿನ ಚಿತ್ತದ ಸ್ಥಿತಿಯೂ ಸಹಿತ ಅವನ ಮುಂದಿನ ಭವಿಷ್ಯಕ್ಕೂ ಆಧಾರಭೂತವಾಗಿರುತ್ತದೆ, ಅದೇ ತೆರನಾಗಿ, ತಂದೆ–ತಾಯಿ ಗರ್ಭಾಧಾರಣೆಯ ಸಂದರ್ಭದಲ್ಲಿ ಯಾವ ಚಿತ್ತದ ಸ್ಥಿತಿಯಲ್ಲಿ ಇದ್ದರೊ ಅದೇ ರೀತಿಯಾಗಿಯೇ ಮಗುವಿನ ಮೇಲೆ ಅಚ್ಚೊತ್ತುತ್ತದೆ. ಜೊತೆಜೊತೆಗೆ ಆ

ಮಗುವಿನ ಜೀವಮಾನದುದ್ದಕ್ಕೂ ಅಂಟಿಕೊಂಡೇ ಇರುತ್ತದೆ. ಹೀಗಾಗಿ, ಇವು ನೋಡಲಿಕ್ಕೆ ಅತ್ಯಂತ ಸಣ್ಣ ಘಟನೆಯಂತೆ ಕಂಡು ಬಂದರೂ ಅದರಲ್ಲೂ ತಂದೆ–ತಾಯಿಯ ಆ ಕ್ಷಣದ ಭಾವಗಳು, ಆ ಕ್ಷಣದ ಹೃದಯಾಭಿಲಾಷೆ, ಅಭೀಪ್ಸೆ ಅಥವಾ ನಿರಾಸಕ್ತಿ, ಏನೇ ಇಂತಹ ಭಾವಗಳಿದ್ದರೂ ಆ ಕ್ಷಣದ ಇಂತಹ ಎಲ್ಲ ವಿಷಯಗಳೂ ಮುಖ್ಯವಾಗಿರುತ್ತವೆ. ಇದು ಮೇಲ್ನೋಟಕ್ಕೆ ಅತ್ಯಂತ ಸಣ್ಣ ಘಟನೆ ಎಂದೆನಿಸಬಹುದು, ಆದರೆ, ಇದು ಅತ್ಯಂತ ಮಹತ್ವಪೂರ್ಣವಾದ ಸಂದರ್ಭಗಳಿಗೆ ಕಾರಣವಾಗಿರುತ್ತದೆ. ಇಂತಹ ಘಟನೆಗಳ ಮೂಲಕ ಜನಿಸುವ ಮಗುವು ದುರಾಚಾರಿಯೂ ಆಗಿರಬಹುದು; ಅಪರಿಪೂರ್ಣತೆಯಿಂದಲೂ ಕೂಡಿರಬಹುದು; ಮತ್ತು ಜೀವನದಲ್ಲಿ ವಿಫಲನಾಗಲೂಬಹುದು. ಆದರೆ ಜನಸಮುದಾಯ ಮಾತ್ರ ಇದರ ಬಗೆಗೆ ಎಚ್ಚರವನ್ನೇ ಹೊಂದಿಲ್ಲ.

ತದನಂತರದಲ್ಲಿ ಮಗುವು ಅಸಭ್ಯವಾಗಿ ವರ್ತಿಸಿದಲ್ಲಿ, ಅದನ್ನು ನಿಂದನೆಗೆ ಒಳಪಡಿಸಲಾಗುತ್ತದೆ. ಆದರೆ ಅವರು ತಮ್ಮನ್ನು ತಾವೇ ನಿಂದಿಸಿಕೊಳ್ಳುತ್ತ, ತಮಗೆ ತಾವೇ "ಎಂತಹ ಭಯಾನಕ ಚಿತ್ತದ ಸಂದರ್ಭದಲ್ಲಿ ನಾನು/ನಾವು ಇಂತಹ ಮಗುವನ್ನು ಈ ಭೂಮಿಗೆ ತರಲು ಪ್ರಯತ್ನಿಸದೆವು" ಎಂದು ಹೇಳಿಕೊಳ್ಳಬೇಕಾಗುತ್ತದೆ. ಈ ಸಂದರ್ಭದಲ್ಲಿ ಇದು ಅವಶ್ಯವೂ ಹೌದು.

**(CWM, 5/411–412)** **– ಶ್ರೀಮಾತೆ**

*

**ನೈಜ ಮಾತೃತ್ವ; ಆತ್ಮವೊಂದರ ಚಿತ್ತದ ಸೃಷ್ಟಿಯ ಜೊತೆಗೇ ಮಾತೃತ್ವವು ಪ್ರಾರಂಭಗೊಳ್ಳುತ್ತದೆ**

ಮಾತೃತ್ವ ಎನ್ನುವುದು ಸ್ತ್ರೀ ಜೀವನದ ಅತೀ ಪ್ರಮುಖ ಘಟ್ಟವಾಗಿರುತ್ತದೆ. ಮಾತೃತ್ವ ಎಂದರೆ ಏನು ಎನ್ನುವದನ್ನು ತಿಳಿದುಕೊಂಡಾಗ ಮಾತ್ರವೇ ಇದು ಗೊತ್ತಾಗುತ್ತದೆ. ಮೊಲಗಳು ಹೇಗೆ ಅನೈಚ್ಛಿಕವಾಗಿ, ಪ್ರಕೃತಿಸಹಜವಾಗಿ, ಯಾಂತ್ರಿಕವಾಗಿ ಮತ್ತು ಅಜ್ಞಾನದಲ್ಲಿ ಮರಿಗಳಿಗೆ ಜನ್ಮ ನೀಡುತ್ತಿವೆಯೋ, ಅಂತಹ ಸ್ಥಿತಿಗೆ ಖಂಡಿತವಾಗಿಯೂ ಮಾತೃತ್ವ ಎಂದು ಕರೆಯಲಾಗುವದಿಲ್ಲ! ನಿಜವಾದ ಮಾತೃತ್ವ ಪ್ರಾರಂಭವಾಗುವದು ಆತ್ಮವೊಂದರ ಆವಿರ್ಭಾವ ಅಥವಾ ಸೃಷ್ಟಿಯಾಗಿರುತ್ತದೆ. ಇಲ್ಲಿ ಆತ್ಮಗತವಾಗಿ ಬಯಸಲ್ಪಟ್ಟು ಆತ್ಮವೊಂದು ಹೊಸ ದೇಹವೊಂದನ್ನು ಪಡೆದು, ಸಾಕಾರಗೊಂಡು ಅವತರಿಸಿ ಬರುವ ಕ್ರಿಯೆ–



ಯಾಗಿರುತ್ತದೆ. ನಿಜವಾಗಿಯೂ ಸ್ತ್ರೀ ಪಾತ್ರವು ದೈವೀಸ್ವಭಾವದ್ದೇ ಆಗಿದೆ. ಆದರೆ ನಾವು ಅದನ್ನು ಆದಷ್ಟು ಬೇಗ ಮರೆಯುತ್ತಿದ್ದೇವೆ.

ಒಂದು ಮಗುವನ್ನು ಧಾರಣ ಮಾಡಿಕೊಂಡು ಅದಕ್ಕೊಂದು ದೇಹದ ರೂಪವನ್ನು, ಅನೈಚ್ಛಿಕವಾಗಿ ಕೊಡುವದು ಮಾತ್ರವೇ ವಿಷಯವಾಗಿರುವದಿಲ್ಲ. ಯಾವಾಗ ಚಿಂತನದ ಶಕ್ತಿಯು ಮತ್ತು ಆತ್ಮಾಭಿಲಾಷೆಯ ಮೂಲಕ, ನಾವು ಪ್ರಜ್ಞಾಪೂರ್ವಕವಾಗಿ, ಒಂದು ಆದರ್ಶಮಯ ವ್ಯಕ್ತಿತ್ವದ ರೂಪಧಾರಣೆಯ ಸೃಷ್ಟಿಗೆ ಕಾರಣರಾಗುತ್ತಿದ್ದೇವೆಯೋ, ಆ ಘಳಿಗೆಯಿಂದಲೇ ಇಂತಹ ಕಾರ್ಯ ನಿಜವಾಗಿಯೂ ಪ್ರಾರಂಭಗೊಳ್ಳುವದು.

ಇಂತಹ ಘಟನೆಯೊಂದನ್ನು ನಡೆಸಲು ಮತ್ತು ಅರಗಿಸಿಕೊಳ್ಳಲು ನಾವು ಅಶಕ್ತರಾಗಿದ್ದೇವೆ ಎಂದು ಯಾವಾಗಲೂ ಹೇಳಬಾರದು. ಅಸಂಖ್ಯಾತ ಘಟನೆಗಳಲ್ಲಿ, ದೃಷ್ಟಾಂತಗಳಲ್ಲಿ ಇಂತಹ ಘಟನೆ ವಿಶೇಷ ಶಕ್ತಿಯ ಮೂಲಕ ಘಟಿಸಿರುವ ಸಾಕ್ಷ್ಯಗಳು ಸಿಗುತ್ತವೆ.

ಎಲ್ಲಕ್ಕಿಂತ ಮೊದಲು, ಈ ತೆರನಾದ ಭೌತಿಕ ವಾತಾವರಣದ ಮಹತ್ವವನ್ನು ಪ್ರಾಚೀನ ಕಾಲದಿಂದಲೂ ಗುರುತಿಸಿ ಅಭ್ಯಸಿಸಲಾಗಿದೆ. ಎಲ್ಲ ಬಗೆಯ ಕಲಾ ಪ್ರಕಾರಗಳನ್ನು ಮತ್ತು ಸೌಂದರ್ಯದ ಪ್ರಕಾರಗಳನ್ನು ಮಹಿಳೆಯರಿಗೆ, ಹಂತ ಹಂತವಾಗಿ ಒದಗಿಸುವ ಮೂಲಕ, ಪ್ರಾಚೀನ ಗ್ರೀಕರು ಅಪರೂಪದ ಸೌಷಮ್ಯಭರಿತವಾದ ಜನಾಂಗವೊಂದನ್ನು ಸೃಷ್ಟಿಸಿಕೊಂಡಿದ್ದರು.

ವೈಯಕ್ತಿಕ ನೆಲೆಯಲ್ಲಿ ಇದಕ್ಕೆ ಬೇಕಾದಷ್ಟು ಉದಾಹರಣೆಗಳಿವೆ. ಯಾವುದೇ ಸ್ತ್ರೀ ಗರ್ಭವತಿಯಾಗಿರುವಾಗ, ಒಂದು ಸುಂದರವಾದ ಚಿತ್ರವನ್ನಾಗಲೀ ಅಥವಾ ಮೂರ್ತಿಯನ್ನಾಗಲಿ ಸದಾ ಗಮನಿಸುತ್ತ ಇರುವದನ್ನು ನಾವು ಕಾಣಬಹುದು. ಅವಳು ಸದಾ ಗಮನಿಸುತ್ತಿದ್ದ ಚಿತ್ರದ ಅಥವಾ ಮೂರ್ತಿಯ ಸೌಂದರ್ಯದಂತೆಯೇ ಮಗುವೊಂದಕ್ಕೆ ಜನ್ಮ ನೀಡುವ ಅಭಿಲಾಷೆಯನ್ನು ಹೊಂದಿರುವದನ್ನು ಕಾಣುತ್ತೇವೆ. ಇಂತಹ ಹಲವಾರು ಘಟನೆಗಳನ್ನು ನಾನು ನೋಡಿದ್ದೇನೆ. ಅಂತಹ ಘಟನೆಗಳಲ್ಲಿ, ಇಲ್ಲಿಯ ಎರಡು ಘಟನೆಗಳು ಸದಾ ನೆನಪಿನಲ್ಲಿವೆ; ಅವರಿಬ್ಬರೂ ಅವಳಿ–ಜವಳಿ. ಇಬ್ಬರೂ ತುಂಬ ಸುಂದರವಾಗಿದ್ದರು. ಆದರೆ ಇಲ್ಲಿನ ಆಶ್ಚರ್ಯದ ಘಟನೆ ಎಂದರೆ, ಇಬ್ಬರೂ ತಮ್ಮ ತಂದೆ–ತಾಯಿಯಂತೆಯೇ ಕಾಣುತ್ತಿದ್ದರು. ಇವರನ್ನು ನೋಡಿದ ನನಗೆ ಸದಾ ನೆನಪಾಗುತ್ತಿದ್ದುದು

ಇಂಗ್ಲಂಡಿನ ಕಲಾಕಾರ ರೇನಾಲ್ಡ್ಸ್ ರಚಿಸಿದ ಪ್ರಸಿದ್ಧ ಚಿತ್ರ. ಒಂದು ದಿನ, ನಾನು ಆ ತಾಯಿಗೆ ಈ ವಿಷಯ ತಿಳಿಸಿದೆ, ಆಗ ತಕ್ಷಣವೇ ಆ ತಾಯಿ ಉದ್ಗಾರದಿಂದ ಹೇಳಿದ್ದು ಹೌದೇ, ಹೀಗಿದೆಯಾ? ನಾನು ಇಂತಹ ಮಕ್ಕಳನ್ನೇ ಬಯಸಿದ್ದೆ ಹಾಗೂ ಅದಕ್ಕಾಗಿಯೇ ನಾನು ರೇನಾಲ್ಡ್ಸ್‌ನ ಪ್ರಸಿದ್ಧ ಚಿತ್ರವೊಂದರ ಪ್ರತಿಯನ್ನು ನಾವು ಮಲಗುವ ಸ್ಥಳದಲ್ಲಿ ಸದಾ ಕಾಣುವಂತೆ ಹಾಕಿದ್ದೆ. ಮಲಗುವದಕ್ಕೆ ಪೂರ್ವದಲ್ಲಿ ಮತ್ತು ಎದ್ದ ತಕ್ಷಣ ನಾನು ನೋಡುತ್ತಿದ್ದುದು ಇದೇ ಚಿತ್ರವನ್ನೇ; ಮತ್ತು ಇಂಥ ಬಯಕೆಯನ್ನು ನಾನು ಹೃದಯಪೂರ್ವಕವಾಗಿ ಬಯಸಿದ್ದೆ. ಹೀಗಾಗಿ ನಮ್ಮ ಇಬ್ಬರೂ ಮಕ್ಕಳು ಆ ಚಿತ್ರದಲ್ಲಿರುವಂತೆಯೇ ಸುಂದರವಾಗಿದ್ದಾರೆ. ಹೀಗಾಗಿ ನನ್ನ ಆಶಯಗಳನ್ನು ಈಡೇರಿಸಿಕೊಳ್ಳಲು ನಾನು ಈ ರೀತಿಯಲ್ಲಿ ಸಮರ್ಥಳಾಗಿದ್ದೇನೆ ಹಾಗೂ ಅದರಿಂದಾಗಿಯೇ ನಾನು ಇಂತಹ ಸುಂದರ ಮಕ್ಕಳನ್ನು ಪಡೆದಿದ್ದೇನೆ ಎಂದರೆ ನಿಮಗೆ ಆಶ್ಚರ್ಯವಾಗಬಹುದು ಎಂದಿದ್ದಳು. ನಿಜವಾಗಿಯೂ ಅವಳು, ತನ್ನ ಯಶಸ್ಸಿನ ಸಫಲತೆಗೆ ಸಹಜವಾಗಿ ಅಭಿಮಾನಿಯಾಗಿದ್ದಳು. ಈ ದೃಷ್ಟಾಂತವು ಉಳಿದೆಲ್ಲ ಮಹಿಳೆಯರಿಗೂ ತುಂಬ ಉಪಯುಕ್ತವಾಗಬಲ್ಲುದು.

ಆದರೆ, ಒಂದು ವೇಳೆ ಈ ಭೌತಿಕ (ಲೌಕಿಕ) ಅಂಶವು ಅತ್ಯಂತ ಕಡಿಮೆ ಸುನಮ್ಯತೆಯ ಹಂತದಲ್ಲಿ ಇದ್ದರೆ ಮತ್ತು ಪ್ರಾಣಮಯ, ಮನೋಮಯ ವಲಯದಲ್ಲಿಯೂ ಸಹಿತ ಹೆಚ್ಚಿನಂಶದಿಂದ ಶಕ್ತಿಪೂರ್ಣದಿಂದ ಕೂಡಿದ್ದಲ್ಲಿ ಮಾತ್ರ, ನಾವು ಇಂತಹ ಪರಿಣಾಮಗಳನ್ನು ಪಡೆದುಕೊಳ್ಳಬಹುದು. ಇಂತಹ ಸಂದರ್ಭದಲ್ಲಿ ನಾವು ಏಕೆ ವಂಶಪಾರಂಪರ್ಯ ಮತ್ತು ಹೂಬೇಹೂಬು (ತದ್ರೂಪು)ಗಳಂತಹ ವಿಷಯಗಳನ್ನು ಒಪ್ಪಿಕೊಳ್ಳಬೇಕು? ಏಕೆಂದರೆ, ಈ ಯಾವ ಸಂಗತಿಗಳೂ ಸ್ವಭಾವದ ಪದ್ಧತಿಯೊಂದು ಮುಂದುವರೆಯುವಲ್ಲಿ ನಮ್ಮ ಅಂತಃಪ್ರಜ್ಞೆಗಿಂತ ಮುಖ್ಯವಾಗಿರುವದಿಲ್ಲ– ಈ ಹಂತದಲ್ಲಿ ನಮ್ಮ ಲಕ್ಷ್ಯವನ್ನು ಕೇಂದ್ರೀಕರಿಸಿ ಮತ್ತು ನಮ್ಮ ಆತ್ಮಾಭಿಲಾಷೆಯ ಮೂಲಕ ಆತ್ಮವೊಂದಕ್ಕೆ ಶರೀರಧಾರಣೆ ಒದಗಿಸುವ ಹಾಗೆ ನಮ್ಮಲ್ಲಿ ಧರಿಸಿಕೊಳ್ಳಲು ಸಾಧ್ಯವಾಗುವುದಲ್ಲವೇ? ಈ ತೆರನಾದ ಪ್ರಯತ್ನಗಳಿಂದ, ಮಾತೃತ್ವ ಎನ್ನುವದು ಒಂದು ಪವಿತ್ರವಾದ ಹಾಗೂ ಅತೀ ಪ್ರಾಮುಖ್ಯವಾದ ಸಂಗತಿಯಾಗಿದೆ; ಖಂಡಿತವಾಗಿಯೂ ಇಂತಹ ವಿಶ್ವಪ್ರಾಣದ ಮಹತ್ವಪೂರ್ಣ ಪ್ರಾಜ್ವಲ್ಯಮಾನ ಕಾರ್ಯವೊಂದರಲ್ಲಿ ನಾವು ಪ್ರವೇಶಿಸುತ್ತೇವೆ. ಹಾಗೂ ಸ್ತ್ರೀತ್ವ ಎನ್ನುವದು ಪ್ರಾಣಿ ಮಾತ್ರದ ಪಾತ್ರದಿಂದ



ದೂರವಾಗಿ ಅದರ ಅತಿಸಾಮಾನ್ಯ ಗುಣಗಳಿಂದ ದೂರವಾಗಿ, ನಿಜವಾದ ಮಾನವೀಯತೆಯ ಕಡೆಗೆ ಮತ್ತು ಅದರ ಶಕ್ತಿಯನ್ನು ಪಡೆದುಕೊಳ್ಳುವ ಕಡೆಗೆ ಸಾಗುತ್ತದೆ.

ಈ ಎಲ್ಲ ಪರಿಣಾಮಗಳಿಂದ, ಈ ಪ್ರಯತ್ನದಲ್ಲಿ, ನಂತರದಲ್ಲಿ, ನಮ್ಮ ನಿಜವಾದ ಕರ್ಮಗಳು ಇರುತ್ತವೆ. ಹಾಗೂ ಈ ಕರ್ಮವು ಯಾವಾಗಲೂ ಅತೀ ಮಹತ್ವದ್ದಾಗಿದ್ದಲ್ಲಿ, ಇದು ಖಂಡಿತವಾಗಿಯೂ, ಈ ಭೂವಿಯ ವಿಕಸನದ ಹಂತದಲ್ಲಿ ವರ್ತಮಾನದಲ್ಲಿ ಅತೀ ಮುಖ್ಯವಾದ ಘಟ್ಟದಲ್ಲಿರುತ್ತದೆ.

**(CWM, 2/157–158)** **– ಶ್ರೀಮಾತೆ**

*

**ತಾಯಿಯಾಗುತ್ತಿರುವವಳು ಬಯಸುತ್ತಿರುವ ಭೌತಿಕ, ಮಾನಸಿಕ, ಭಾವನಾತ್ಮಕ ಮತ್ತು ಧಾರ್ಮಿಕ ವಾತಾವರಣದ ಮಹತ್ವ**

ಪ್ರಾಚೀನ ಕಾಲದ ಹಲವು ದೇಶಗಳಲ್ಲಿ ಈಗಲೂ ಸಹಿತ ಕೆಲವು ದೇಶಗಳಲ್ಲಿ– ಗರ್ಭವತಿಯಾದ ಸ್ತ್ರೀಯನ್ನು ಸುಂದರ, ಸೌಷಮ್ಯವಾದ ಮತ್ತು ಶಾಂತಪೂರ್ಣ ವಾತಾವರಣದಲ್ಲಿ ಆರೋಗ್ಯಪೂರ್ಣವಾಗಿರುವಂತಹ ಪರಿಸರದಲ್ಲಿ ಮತ್ತು ಭೌತಿಕವಾಗಿ ಯಾವಾಗಲೂ ಸುಷಮ್ಯತೆಯಿಂದ ಕೂಡಿರುವ ಸಂದರ್ಭದಲ್ಲಿ ಇರುವಂತೆ ಏರ್ಪಾಟು ಮಾಡಲಾಗುತ್ತದೆ. ಈ ಮೂಲಕ ಜನಿಸುವ ಮಗುವು ಈ ಎಲ್ಲ ಅಂಶಗಳನ್ನೂ ಪಡೆದುಕೊಳ್ಳಲು ಸಹಾಯಕವಾಗುತ್ತದೆ. ಇದು ನಿಜವಾಗಿಯೂ ನಡೆಯಬೇಕೆಂದು ಎಲ್ಲರ ಆಶಯವೂ ಆಗಿರುತ್ತದೆ. ಇದು ಮನುಷ್ಯನಿಗೆ ಸುಲಭ ಸಾಧ್ಯವಿರುವ ಕೆಲಸವೂ ಹೌದು. ಮಾನವ ಜನಾಂಗವೂ ಸಹಿತ ಇದೊಂದು ಅಪರೂಪದ ಘಟನೆ ಎಂದುಕೊಳ್ಳದ ಹಾಗೆ ಅಭಿವೃದ್ಧಿ ಹೊಂದಿದೆ. ಮತ್ತು ಇದು ಅತಿ ಸಹಜವಾದ ಆಶಯವೂ ಆಗಿದ್ದು, ಕೆಲವೇ ಕೆಲವು ವ್ಯಕ್ತಿಗಳಾದರೂ ಇದನ್ನು ಯೋಚಿಸುವಂತಾಗಿದೆ. ಬಹುತೇಕವಾಗಿ ಉಳಿದ ಅಸಂಖ್ಯಾತ ಜನರು, ಅವರು ಬಯಸದೇನೇ ಮಕ್ಕಳನ್ನು ಪಡೆಯುತ್ತಿದ್ದಾರೆ.

ನಾನು ಹೇಳಬೇಕೆಂದ ವಿಷಯ ಇದಾಗಿದೆ.

ಒಂದು ಆತ್ಮವನ್ನು ಆಹ್ವಾನಿಸಲು ಸಾಧ್ಯವಿದೆ. ಆದರೆ ಅದಕ್ಕಾಗಿ ಒಬ್ಬರಾದರೂ ಪ್ರಜ್ಞಾಪೂರ್ವಕವಾಗಿ ಸಂಪೂರ್ಣವಾಗಿ ತನ್ನನ್ನು ತೊಡಗಿಸಿಕೊಳ್ಳಬೇಕಾಗುತ್ತದೆ.

ಅದರಲ್ಲೂ ನಿಗದಿತವಾದ ರೀತಿಯಲ್ಲಿಯೇ ಏನು ಮಾಡಲ್ಪಡಬೇಕೆಂದು ನಿರ್ಧರಿಸಲಾಗಿದೆಯೋ ಅದನ್ನೆಲ್ಲ ಉತ್ತಮ ರೀತಿಯಲ್ಲಿಯೇ ನಿರ್ವಹಿಸಬೇಕಾಗುತ್ತದೆ. ಇದು ಅಪರೂಪದಲ್ಲಿ ಅಪರೂಪವಾದ ಸಂಗತಿ. ಆದರೆ ಖಂಡಿತವಾಗಿಯೂ ಸಾಧ್ಯತೆ ಇರುವ ಸಂಗತಿಯಾಗಿದೆ.

**(CWM, 8/200) – ಶ್ರೀಮಾತೆ**

*

... ತಾಯಿಯಾಗುವವಳು, ಅವಳು ಗರ್ಭವತಿಯಾಗಿರುವವರೆಗೂ, ಯಾವುದೇ ಕಾರಣಕ್ಕೂ ದೋಷಪೂರಿತ ವಾತಾವರಣದಿಂದ ಸಂಪೂರ್ಣವಾಗಿ ದೂರವಾಗಿಯೇ ಇರುವ ಸುರಕ್ಷಿತ ವಾತಾವರಣದಲ್ಲಿ ಇರಬೇಕಾಗುತ್ತದೆ. ಇಂತಹ ವಾತಾವರಣದಲ್ಲಿ ಅವಳನ್ನು ರಕ್ಷಿಸಬೇಕಾಗುತ್ತದೆ. ಒಂದು ಆದರ್ಶಮಯವಾದ ವಾತಾವರಣದಲ್ಲಿ, ಸುಂದರವಾದ ಪ್ರದೇಶದಲ್ಲಿ, ಆಹ್ಲಾದದಾಯಕ ವಾತಾವರಣದಲ್ಲಿ, ಎಲ್ಲಿ ಎಲ್ಲವೂ ಸೌಷಮ್ಯದಿಂದ ಕಂಗೊಳಿಸುತ್ತಿರುತ್ತದೆಯೋ ಅಲ್ಲಿ, ಒಟ್ಟಿನಲ್ಲಿ ಸಂಪೂರ್ಣ ವಾತಾವರಣವು, ಉಲ್ಲಾಸಮಯದಲ್ಲಿ ಇದ್ದು, ಅಲ್ಲಿ ಎಲ್ಲ ರೀತಿಯ ದುಷ್ಟ ವಾತಾವರಣದಿಂದ ಮುಕ್ತವಾದ ರಕ್ಷಣೆಯ ವಲಯ ಇರಬೇಕಾಗುತ್ತದೆ. ಅದರಲ್ಲೂ ತಾಯಿಯಾಗುವವಳು ಓರ್ವ ಆದರ್ಶಪೂರ್ಣವಾದ ಮಗುವನ್ನು ಪಡೆಯಲು ಸದಾ ಚಿಂತನದಲ್ಲಿರಬೇಕಾಗುತ್ತದೆ. ಇದು ಕೇವಲ ಯಾಂತ್ರಿಕವಾಗಿ ಅನುಷ್ಠಾನಿಸದೇ, ಹೃದಯಪೂರ್ವಕವಾಗಿ ತನ್ನನ್ನು ತೊಡಗಿಸಿಕೊಳ್ಳಬೇಕಾಗುತ್ತದೆ. ಒಟ್ಟಿನಲ್ಲಿ ಸಂಪೂರ್ಣವಾಗಿ ಸೃಷ್ಟಿಗೆ ಪೂರಕವಾದ ವಾತಾವರಣ ಇರಬೇಕಾಗುತ್ತದೆ ಎಂದು ನಾವು ಹೇಳಲೇಬೇಕಾಗಿದೆ.

*

**ಮಗುವನ್ನು ಪಡೆಯುವ ಮುನ್ನ ತಾಯಿಯು ಮೊದಲು ತನ್ನನ್ನು ತಾನು ರೂಪಣೆಗೊಳಿಸಿಕೊಳ್ಳಬೇಕಿದೆ.**

ಏನೇ ಆದರೂ, ನಮಗೆಲ್ಲ ಇರುವ ಅನುಭವದ ಪ್ರಕಾರ ನಿಮ್ಮ ಕಲ್ಪನೆಗೆ ತಕ್ಕ ಹಾಗೆ ನೀವು ರೂಪವನ್ನು ಕೊಟ್ಟುಕೊಳ್ಳುವಲ್ಲಿ ಸಾಧ್ಯವಾಗುವದು; ವಿಶಾಲಾರ್ಥದಲ್ಲಿ ನೀವು ಕಲ್ಪಿಸಿಕೊಂಡ ಗುಣವನ್ನು ನೀವು ಕೊಡಬಹುದು; ಇದೆಲ್ಲವೂ ಸರಿ ಎಂದೇ ಕಾಣುತ್ತದೆ. ಇದರ ಪ್ರಾರಂಭಕ್ಕೆ, ತಾಯಿಯಾಗುವವಳು ತನ್ನನ್ನು ಮೊದಲು ತರಬೇತುಗೊಳಿಸಿಕೊಳ್ಳಬೇಕೇ ವಿನಾ ಜನಿಸಲಿರುವ ಮಗುವನ್ನಲ್ಲ. ತದನಂತರದಲ್ಲಿ,



ಸ್ವಂತದ ಭಾವನೆಗಳನ್ನು ಅತ್ಯಂತ ಬಿಗಿಬಂಧವಾದ ಸ್ವಯಂ ನಿಯಂತ್ರಣದಲ್ಲಿ ಇರಿಸಿಕೊಳ್ಳಬೇಕಾಗುತ್ತದೆ. ಮಗುವಿನ ರೂಪಣೆಯ ವಿಷಯಗಳನ್ನು ಇಲ್ಲಿ ಮಿಶ್ರಗೊಳಿಸಿಕೊಳ್ಳುವ ಹಂತದಿಂದ ತಪ್ಪು ಕ್ರಿಯೆಗಳ್ನು ಮಾಡುವಂತಾಗಬಾರದು. ಹಾಗೆಂದು ಇದೇನೂ ಸಂಪೂರ್ಣವಾಗಿ ನವೀನ ವಿಷಯವಂತೂ ಅಲ್ಲ. ಇದು ಮೊದಲಿನಿಂದಲೂ ನಡೆಯುತ್ತಲೇ ಬಂದಿರುವ ಘಟನೆ. ಮತ್ತು ಮಗುವನ್ನು ನಿರೀಕ್ಷಿಸುತ್ತಿರುವ ಎಲ್ಲರಿಂದಲೂ ಅನುಷ್ಠಾನಗೊಳ್ಳುತ್ತಿರುವ ಸಂಗತಿಯಾಗಿದೆ. ಹೀಗಾಗಿ ಇದು ನನಗೆ ತಿಳಿದ ಸಂಗತಿಯಾಗಿದೆ.

ಆದರೆ ಮತ್ತೆ ಮತ್ತೆ ಇಲ್ಲಿ ಗಮನದಲ್ಲಿಟ್ಟುಕೊಳ್ಳಬೇಕಾದ ಸಂಗತಿ ಎಂದರೆ, ತಾಯಿಯಾದವಳು ಮೊದಲು ಇದನ್ನು ಅರಿತುಕೊಳ್ಳಬೇಕಾಗಿದೆ, ಅದರಲ್ಲೂ ಅವಳು ಮಗುವನ್ನು ಹೆರುವ ಪೂರ್ವದಲ್ಲಿಯೇ ಎನ್ನುವದು ಅತೀ ಮುಖ್ಯ.

**ಶ್ರೀಮಾತೆ: ಶಿಷ್ಯನೊಡನೆ ಸಂವಾದ. ಎಪ್ರೀಲ 19, 1967.**

*

**ಹೆರಿಗೆ – ಶಕ್ತಿಯ ಅವಧಾರಣ, ಆರೋಗ್ಯಪೂರ್ಣ ಶರೀರ ಮತ್ತು ಸಹಜ ನಿಯಮಗಳು**

... ಮಹಿಳೆಗೆ ಸೂಕ್ತವಾದ ದೈಹಿಕ ಚಟುವಟಿಕೆಗಳ ಮೂಲಕ ಮತ್ತು ಸುಪುಷ್ಟವಾದ ಶರೀರವನ್ನು ಹೊಂದುವ, ಮಗುವಿನ ರಚನೆ ಮತ್ತು ಅವತರಣವಾಗುವವರೆಗೂ ಮತ್ತು ಅತಿ ಸುಲಭವಾಗಿ, ಕಡಿಮೆ ನೋವಿನ ಮೂಲಕ ಮಗುವಿನ ಜನ್ಮ ಕೊಡುವ – ಹೀಗೆ ಬೇಕಾದ ಎಲ್ಲ ವಿಷಯಗಳಲ್ಲಿ ತರಬೇತಿ ಕೊಡಬೇಕಾಗುತ್ತದೆ.

ನಾನು ಕೇಳಿರುವಂತಹ ಒಂದು ಅಧಿಕೃತ ಘಟನೆಯಲ್ಲಿ, ಆಫ್ರಿಕನ್ ಮಹಿಳೆಯೋರ್ವಳು ಬಹುಭಾರದ ಹೊರೆಯನ್ನು ಹೊತ್ತು ಮೈಲುಗಟ್ಟಳೆ ನಡೆಯಬೇಕಾಗಿತ್ತು. ಅವಳಾಗ ಗರ್ಭಿಣಿ. ಈ ರೀತಿಯ ದಿನನಿತ್ಯದ ವ್ಯಾಯಾಮದಲ್ಲಿಯೇ ಒಂದು ದಿನ ಅವಳಿಗೆ ಹೆರಿಗೆಯಾಯಿತು. ಅವಳು ತಾನು ಸಾಗುತ್ತಿದ್ದ ದಾರಿಯ ಬದಿಯಲ್ಲಿಯೇ ಇದ್ದ ಒಂದು ಮರದ ಬಳಿ ಕುಳಿತುಕೊಂಡು, ಮಗುವಿಗೆ ಜನ್ಮ ಕೊಟ್ಟಳು. ಮತ್ತೆ ಅರ್ಧ ತಾಸು ಕಾಯುತ್ತಿದ್ದು, ನಂತರ ಅದೇ ತಾನೆ ಜನಿಸಿದ ಮಗುವನ್ನು ಕಂಕುಳಿಗೇರಿಸಿ, ಜೊತೆಗೆ

ತಲೆಹೊರೆಯನ್ನೂ ಏರಿಸಿಕೊಂಡು, ಶಾಂತವಾಗಿ– ಏನೂ ಅನಿರೀಕ್ಷಿತವು ನಡೆದೇ ಇಲ್ಲವೆನ್ನುವ ಭಾವದಲ್ಲಿ ತನ್ನ ಮನೆಯೆಡೆಗೆ ಸಾಗುತ್ತಾಳೆ. ಒಂದು ಹೆಣ್ಣು ಆರೋಗ್ಯಪೂರ್ಣವಾಗಿದ್ದಲ್ಲಿ ಮತ್ತು ಶಕ್ತಿ ಹಾಗೂ ಆರೋಗ್ಯದ ಮೇಲೆ ಸಂಪೂರ್ಣ ಪ್ರಭುತ್ವವಿದ್ದಲ್ಲಿ ಏನನ್ನೂ ಸಾಧಿಸಬಲ್ಲಳು ಎನ್ನುವದಕ್ಕೆ ಇದು ಒಂದು ಅತ್ಯಪರೂಪದ ಘಟನೆಯಾಗಿ ಉಳಿದಿದೆ.

ವೈದ್ಯರು ಹೇಳುವ ಪ್ರಕಾರ ನಾಗರಿಕ ಸಮಾಜದಲ್ಲಿ ಇಂತಹ ಸಂಗತಿಗಳು ನಡೆಯಲಾರವು, ಇದು ನಮ್ಮ ನಾಗರಿಕತೆಯು ಬೆಳೆದು ನಿಂತಿದೆ ಎಂದು ಭಾವಿಸಲಾಗುತ್ತಿರುವ ಪರಿಸ್ಥಿತಿಯ ಚಿತ್ರಣವಾಗಿದೆ; ಆದರೆ ನಾವು ಇದನ್ನು ತಿರಸ್ಕರಿಸಲು ಸಾಧ್ಯವಿಲ್ಲ. ಅದರಲ್ಲೂ ದೈಹಿಕ ಶಕ್ತಿಯ ವಿಷಯದಲ್ಲಿ, ಮತ್ತು ಲೌಕಿಕದ ವಾತಾವರಣದಲ್ಲಿ, ಎಲ್ಲ ಸಂವೇದನಾತ್ಮಕ ಸಂಗತಿಗಳನ್ನೂ ಗಮನಿಸಿದಾಗ, ಈಗಿನ ಎಲ್ಲ ತೊಂದರೆಗಳೂ ಹಾಗೂ ಸಂಕೀರ್ಣತೆಗಳು ನಮ್ಮ ಆಧುನಿಕ ನಾಗರೀಕತೆಯ ಸೃಷ್ಟಿಗಳಾಗಿವೆ ಎಂಬ ಅರಿವಾಗುತ್ತದೆ.

ಮೇಲಾಗಿ, ವೈದ್ಯರೂ ಸಹಿತ ಸಾಮಾನ್ಯವಾಗಿ ನೈಸರ್ಗಿಕವಲ್ಲದ ವಿಧಾನ–ಗಳಲ್ಲಿಯೇ ಆಸಕ್ತಿ ಹೊಂದಿದ್ದಾರೆ. ಅವರು ಎಲ್ಲವನ್ನೂ ಅದೇ ದೃಷ್ಟಿಕೋನದಿಂದಲೇ ಪರೀಕ್ಷಿಸುತ್ತಿದ್ದಾರೆ. ಆದರೆ, ನಮಗೆ, ಇದು ಸಂಪೂರ್ಣ ಬೇರೆಯದೇ ಸಂಗತಿ. ಅನೈಸರ್ಗಿಕವಾದ ದೃಷ್ಟಿಕೋನವು ಯಾವಾಗಲೂ ಕೀಳರಿಮೆಯ ಮತ್ತು ವಿರೂಪಗೊಂಡ ರೀತಿಯಲ್ಲಿ ಇರುತ್ತದೆ. ನಾವು ಮಾತ್ರ ಸಾಮಾನ್ಯದಿಂದಲೇ ಅಸಾಮಾನ್ಯತೆಯ ಕಡೆಗೆ ಊರ್ಧ್ವಮುಖ ವಿಕಾಸನಕ್ಕೆ ತೆರೆದುಕೊಳ್ಳಬೇಕಿದೆ.

**(CWM, 12/295–296)** **– ಶ್ರೀಮಾತೆ**

*

**ಹೆರಿಗೆಯ ಅವಧಿಯಲ್ಲಿನ ವಾತಾವರಣ:**

ಹೆರಿಗೆಯ ಅವಧಿಯಲ್ಲಿ ವಾತಾವರಣವು ಸಂಪೂರ್ಣವಾಗಿ ಪ್ರಶಾಂತತೆಯಿಂದ ಕೂಡಿದ್ದು, ಶಾಂತ ವಾತಾವರಣದಲ್ಲಿದಲ್ಲಿ ಮಾತ್ರ "ವಿಶ್ವ ಪ್ರಾಣವು" ಯಾವುದೇ ತೊಂದರೆ ಇಲ್ಲದೇ ತನ್ನ ಕಾರ್ಯದಲ್ಲಿ ಸಫಲವಾಗುತ್ತದೆ.

**– ಶ್ರೀಮಾತೆ**

*



# ನಿಜವಾದ ಮಾತೃತ್ವ ಹಾಗೂ ಹುಟ್ಟಿಗೆ ಮುಂಚಿನ ಪ್ರೇಮ

## ಮಾನವ ಸತ್ತೆಗಳಲ್ಲಿ ಹಾಗೂ ಪಶುಗಳಲ್ಲಿ ಮಾತೃತ್ವದ ಪ್ರೇಮ

**ಪ್ರಶ್ನೆ:** *ಪ್ರೀತಿಸುವ ಅರಳಿಕೆಯೊಂದಿಗೆ ಹೂವು ಸೌಂದರ್ಯ ಹಾಗೂ ಸುವಾಸನೆಯ ಕಾಣಿಕೆ ಕೊಡುತ್ತದೆ. ಪಶುವಿನಲ್ಲಿ ಅದರ ಹಸಿವು ನೀರಡಿಕೆಗಳೊಂದಿಗೆ ಹಿಂದೆ ಅದಿರುವುದಿಲ್ಲವೆ? ವಶಪಡಿಸಿಕೊಳ್ಳುವಿಕೆ, ವಿಸ್ತರಣ, ಸಂತಾನ ಪಡೆಯುವಿಕೆ ಇವು ಪ್ರಜ್ಞಾಪೂರ್ಣವಾಗಿರುವ, ಇಲ್ಲವೆ ಆಗಿರದೆ ಇರುವ, ಸಂಕ್ಷಿಪ್ತದಲ್ಲಿ ಹೇಳುವುದಾದರೆ ಎಲ್ಲ ಆಸೆಯ ಹಿಂದೆ ಇವಿರುವ ಆವಶ್ಯಕತೆ ಇರುವುದಿಲ್ಲವೆ? ಮತ್ತು ಉಚ್ಚತರ ದರ್ಜೆಗಳಲ್ಲಿ ಮಕ್ಕಳಿಗಾಗಿ ಸ್ವ–ತ್ಯಾಗಮಾಡುವ ಶ್ರದ್ಧೆ ಇರುವುದಿಲ್ಲವೆ?*

**ಶ್ರೀಮಾತೆ:** ... ಯಾವುದು ಮಾನವ ಸತ್ತೆಗಳಲ್ಲಿ ಮಾತೃತ್ವದ ಪ್ರೇಮವಾಗಿರುತ್ತದೆ, ಒಂದೇ ವ್ಯತ್ಯಾಸವೆಂದರೆ ಅದು ತನ್ನ ಬಗ್ಗೆ ಪ್ರಜ್ಞಾಪೂರ್ಣವಾಗಿರುತ್ತದೆ, ಅದು ಮಾನವ ಸತ್ತೆಗಳಿಗೆ ಇರುವಂತಹದಕ್ಕಿಂತ ಪಶುಗಳಲ್ಲಿ ಬಹಳಷ್ಟು ಪರಿಶುದ್ಧ ಕೂಡ ಆಗಿರುತ್ತದೆ. ಪಶುಗಳು ತಮ್ಮ ಚಿಕ್ಕ ಮರಿಗಳಿಗಾಗಿ ಶ್ರದ್ಧೆ, ಕಾಳಜಿ ಹಾಗೂ ಸ್ವ–ವಿಸ್ಮರಣೆ ಹೊಂದಿದ್ದ ಸಂಪೂರ್ಣವಾಗಿ ಅದ್ಭುತವಾಗಿರುವ ಉದಾಹರಣೆಗಳಿವೆ. ಕೇವಲ ಅದು ಸ್ವಯಂಪ್ರೇರಿತವಾಗಿರುತ್ತದೆ, ಅದನ್ನು ಕುರಿತು ಚಿಂತನೆ ಮಾಡಲಾಗಿರುವುದಿಲ್ಲ. ಪಶು ತಾನೇನು ಕೈಕೊಳ್ಳುತ್ತದೆ ಎಂಬುದನ್ನು ಕುರಿತು ಯೋಚನೆ ಮಾಡುವುದಿಲ್ಲ. ಮನುಷ್ಯ ಯೋಚನೆ ಮಾಡುತ್ತಾನೆ. ಕೆಲವೊಮ್ಮೆ ಇದು ಆ ಚಲನೆಯನ್ನು ಹಾಳುಮಾಡುತ್ತದೆ. (ಕೆಲವೊಮ್ಮೆ ಬಹಳಷ್ಟು ಸಲ) ಕೆಲವೊಮ್ಮೆ ಅದು ಉಚ್ಚತರ ಯೋಗ್ಯತೆಯನ್ನು ಕೊಡಬಹುದು, ಆದರೆ ಅದು ಅಪರೂಪಕ್ಕೆ ಸಂಭವಿಸುವಂತಹದು. ಪಶುಗಳಲ್ಲಿರುವುದಕ್ಕಿಂತ ಕಡಿಮೆ ಪ್ರಮಾಣದಲ್ಲಿ ಮನುಷ್ಯನ ಚಲನೆಯಲ್ಲಿ ಸ್ವಯಂಪ್ರೇರಣೆ ಇರುತ್ತದೆ.

ನನ್ನ ಬಳಿ ಒಂದು ಪುಸ್ಸಿ (pussy) ಬೆಕ್ಕು ಇತ್ತು. ಮೊದಲ ಸಲ ಅದು ಮರಿಗಳನ್ನು ಹಾಕಿದಾಗ ಅವುಗಳಿಂದ ದೂರ ಹೋಗಲು ಇಷ್ಟಪಡಲಿಲ್ಲ, ತಿನ್ನಲಿಲ್ಲ, ಪ್ರಕೃತಿಯ ಕರೆಗಳಿಗೆ ಓಗೊಡಲಿಲ್ಲ, ಅದು ಅಲ್ಲಿಯೆ ತನ್ನ ಮರಿಗಳಿಗೆ ಅಂಟಿಕೊಂಡಿತ್ತು, ರಕ್ಷಣೆ ಮಾಡುತ್ತಿತ್ತು, ಅವುಗಳಿಗೆ ಮೊಲೆಯೂಟ ಉಣಿಸುತ್ತಿತ್ತು, ಅವುಗಳಿಗೆ ಏನಾದರೂ ಆಗಬಹುದೆಂದು ಬಹಳ ಹೆದರಿಕೊಂಡಿತ್ತು, ಅದು ಅದರ ಹುಟ್ಟುಗುಣದಿಂದ ಹಾಗೆ ಆಗಿತ್ತು; ಮತ್ತು ಅದನ್ನು ಯೋಚನೆ ಮಾಡಿ

ಕೈಕೊಂಡದ್ದಾಗಿರಲಿಲ್ಲ, ಸ್ವಯಂಪ್ರೇರಿತವಾಗಿತ್ತು. ನಂತರ ಮರಿಗಳು ದೊಡ್ಡವಾದಾಗ ಅವುಗಳಿಗೆ ಶಿಕ್ಷಣ ನೀಡುವ ತೊಂದರೆ ತೆಗೆದುಕೊಂಡಿತು– ಅದು ಅದ್ಭುತವಾಗಿತ್ತು, ಅದರಲ್ಲಿ ಎಷ್ಟೊಂದು ತಾಳ್ಮೆಯಿತ್ತು! ಮರಿಗಳಿಗೆ ಆಹಾರವನ್ನು ಹಿಡಿದುಕೊಳ್ಳಲು ಒಂದು ಗೋಡೆಯಿಂದ ಇನ್ನೊಂದು ಗೋಡೆಗೆ ಜಿಗಿದು ಹೋಗುವುದನ್ನು ಕಲಿಸಿಕೊಟ್ಟಿತು, ಅದನ್ನು ಒಮ್ಮೆ ಹತ್ತು ಸಲ, ಅವಶ್ಯವಾದರೆ ನೂರು ಸಲ ಪುನರಾವರ್ತಿಸುತ್ತಿತ್ತು. ತನಗೆ ಅವಶ್ಯವೆನಿಸಿದಷ್ಟನ್ನು ಮರಿಗಳು ಕೈಕೊಳ್ಳುವವರೆಗೆ ಅದು ದಣಿದುಕೊಳ್ಳುತ್ತಿರಲಿಲ್ಲ. ಅದು ಅತ್ಯದ್ಭುತವಾದ ಶಿಕ್ಷಣ. ಗೋಡೆಗಳ ತುದಿಗಳನ್ನು ಅನುಸರಿಸಿ ಬರುವ ಮನೆಗಳ ಅಂಚಿನಲ್ಲಿ ಹೇಗೆ ದಾಟಿಕೊಂಡು ಹೋಗಬೇಕು, ಬೀಳದಂತೆ ಹೇಗೆ ನಡೆಯಬೇಕು, ಒಂದು ಗೋಡೆ ಹಾಗೂ ಇನ್ನೊಂದು ಗೋಡೆ ಇವುಗಳ ನಡುವೆ ಅಂತರ ಹೆಚ್ಚಿದ್ದಾಗ ಏನನ್ನು ಕೈಕೊಳ್ಳಬೇಕು ಇದೆಲ್ಲವನ್ನು ಮರಿಗಳಿಗೆ ಅದು ಕಲಿಸಿಕೊಟ್ಟಿತು. ಅಂತರವನ್ನು ಮರಿಗಳು ನೋಡಿದಾಗ ಬಹಳ ಹೆದರಿಕೊಂಡಿರುತ್ತಿದ್ದವು ಮತ್ತು ಜಿಗಿದು ಹೋಗುವುದನ್ನು ತಿರಸ್ಕರಿಸುತ್ತಿದ್ದವು. (ಅದು ಅವುಗಳಿಗೆ ಬಹಳ ದೂರದ್ದಾಗಿರಲಿಲ್ಲ. ಆದರೆ ಅಲ್ಲಿ ಅಂತರವಿತ್ತು, ಅವು ಧೈರ್ಯ ತಂದುಕೊಳ್ಳುತ್ತಿದ್ದಲ್ಲಿ) ನಂತರ ತಾಯಿಬೆಕ್ಕು ಜಿಗಿದು ಹೋಗಿ ಮರಿಗಳಿಗೆ ಬಾ ಎಂದು ಕರೆಯಿತು. ಅವು ಚಲಿಸಲಿಲ್ಲ, ನಡುಗುತ್ತಿದ್ದವು. ತಾಯಿಬೆಕ್ಕು ಮರಳಿ ಹೋಗಿ ಮರಿಗಳತ್ತ ಮಾತನಾಡಿತು. ತನ್ನ ಮುಂಗಾಲುಗಳಿಂದ ಅವುಗಳಿಗೆ ಚಿಕ್ಕ ಹೊಡೆತ ಕೊಟ್ಟಿತು ಹಾಗೂ ನೆಕ್ಕಿ ಪ್ರೀತಿ ತೋರಿಸಿತು, ಆದಾಗ್ಯೂ ಅವು ಚಲಿಸಲಿಲ್ಲ. ಅದು ಜಿಗಿದು ಹೋಯಿತು. ಇದನ್ನು ಅರ್ಧಗಂಟೆ ಕಾಲ ಮಾಡುತ್ತಿರುವುದನ್ನು ನೋಡಿದೆ. ಅರ್ಧ ಗಂಟೆಯ ನಂತರ ಅವು ಸಾಕಷ್ಟು ಕಲಿತುಕೊಂಡಿವೆ ಎಂಬುದನ್ನು ನೋಡಿತು. ಹೆಚ್ಚಿನ ರೀತಿಯಲ್ಲಿ ತಯಾರಾಗಿದೆ ಎಂದು ಸ್ಪಷ್ಟವಾಗಿ ಪರಿಗಣಿಸಿದ ನಂತರ ಮರಿಯ ಹಿಂದೆ ಹೋಗಿ ತನ್ನ ತಲೆಯಿಂದ ಬಲವಾಗಿ ನೂಕಿತು. ಆಗ ಆ ಚಿಕ್ಕಮರಿ ತತ್ಕ್ಷಣ ಜಿಗಿಯಿತು. ಒಮ್ಮೆ ಅದು ಜಿಗಿದು ಹೋದ ನಂತರ ಮತ್ತೆ ಮತ್ತೆ ಜಿಗಿಯುತ್ತ ಹೋಯಿತು.

ಈ ಬಗೆಯ ತಾಳ್ಮೆಯಿಂದಿರುವ ತಾಯಿಂದಿರು ಬಹಳ ಕಡಿಮೆ ಸಂಖ್ಯೆಯಲ್ಲಿದ್ದಾರೆ.

**(CWM, 5/242–43)** **– ಶ್ರೀಮಾತೆ**

*



## ಶ್ರದ್ಧೆ, ಸ್ವ–ವಿಸ್ಮರಣೆ, ಸ್ವ–ನಿರಾಕರಣೆ, ತಾಳ್ಮೆ

**ಪ್ರಶ್ನೆ:** *ಮಧುರ ಮಾತೆಯವರೆ, ಪಾಲಕರು ತಮ್ಮ ಮಕ್ಕಳಿಗಾಗಿ ಯಾವ ಬಗೆಯ ಪ್ರೀತಿಯನ್ನು ಹೊಂದಿರುತ್ತಾರೆ?*

**ಶ್ರೀಮಾತೆ:** ಯಾವ ಬಗೆಯದು? ಮಾನವ ರೀತಿಯ ಪ್ರೀತಿಯಲ್ಲವೆ? ಎಲ್ಲ ಪ್ರೀತಿಗಳ ಹಾಗೆ ಎಲ್ಲ ಬಗೆಯ ವಿಷಯಗಳೊಂದಿಗೆ ಭಯಾನಕ ರೀತಿಯಲ್ಲಿ ಮಿಶ್ರಣಕ್ಕೊಳಗಾದ ಪ್ರೀತಿಯನ್ನು ಹೊಂದಿರುತ್ತಾರೆ. ಸ್ವಾಧೀನಪಡಿಸಿಕೊಳ್ಳುವುದರ ಹಾಗೂ ಅಹಂಭಾವದ ಆವಶ್ಯಕತೆಯಿದೆ. ಮೊದಲು ನಾನು ಹೇಳಲಿರುವುದೇನೆಂದರೆ ತಾಯಿಯ ಪ್ರೀತಿ ಕುರಿತು ಅದ್ಭುತ ಚಿತ್ರಣಗಳಿವೆ. ಹಲವಾರು ಪುಸ್ತಕಗಳನ್ನು ಬರೆಯಲಾಗಿದೆ, ತನ್ನ ಮಕ್ಕಳ ಬಗ್ಗೆ ಇರುವ ಪ್ರೀತಿ ಕುರಿತು ಅದ್ಭುತ ವಿಷಯಗಳನ್ನು ಹೇಳಲಾಗಿದೆ ಸರಿ, ಆ ವಿಷಯವನ್ನು ಕುರಿತು ಹೂವುಗಳು ಅರಳಿದ ಹಾಗೆ ತೋರಿಬರುವ ಮಾತುಗಳನ್ನಾಡಲು ಇರುವ ಕ್ಷಮತೆಯ ಹೊರತಾಗಿ ಮೊಲೆಯನ್ನು ಉಣಿಸುವ ಪ್ರಾಣಿಕ ವರ್ಗ ತಮ್ಮ ಮಕ್ಕಳಿಗಾಗಿ ಅದೇ ಬಗೆಯ ಸ್ವಭಾವ: ಎಂದರೆ ಅಂತಹದೇ ಶ್ರದ್ಧೆ, ಸ್ವ–ವಿಸ್ಮರಣೆ, ಸ್ವ–ನಿರಾಕರಣೆ, ಶಿಕ್ಷಣಕ್ಕಾಗಿ ಅದೇ ಬಗೆಯ ತಾಳ್ಮೆ ಇವೆಲ್ಲ ಇರಬೇಕಾಗುತ್ತದೆ. ನಾನು ಸಂಪೂರ್ಣವಾಗಿ ಅದ್ಭುತವಾಗಿರುವ ವಿಷಯಗಳನ್ನು ನೋಡಿದ್ದೇನೆ, ಅವುಗಳನ್ನು ಬರೆದಿಡಲಾಗುತ್ತಿದ್ದರೆ ಬೆಕ್ಕಿಗೆ ಅನ್ವಯಿಸುವುದರ ಬದಲಾಗಿ ಓರ್ವ ಸ್ತ್ರೀಗೆ ಅನ್ವಯಿಸಿದ್ದರೆ ಉತ್ಕೃಷ್ಟ ಕಾದಂಬರಿಗಳನ್ನು ರಚಿಸಬಹುದಾಗಿತ್ತು ಮತ್ತು ಜನರು ಅದೆಂತಹ ಮಹಿಳೆ ಇವಳು ಎಂದು ಹೇಳುತ್ತಿದ್ದರು! ತಮ್ಮ ಮಾತೃತ್ವದ ಪ್ರೀತಿಯಲ್ಲಿ ಈ ಮಹಿಳೆಯರು ಅದ್ಭುತ ರೀತಿಯಲ್ಲಿ ಶ್ರದ್ಧೆಯುಳ್ಳವರಾಗಿದ್ದಾರೆ: ನಿಖರವಾಗಿ ಅದೇ ವಿಷಯ. ಬೆಕ್ಕುಗಳಿಗೆ ಹೂವರಳಿಸುವಂತಹ ಭಾಷೆಯನ್ನು ಉಪಯೋಗಿಸುವುದು ಸಾಧ್ಯವಿಲ್ಲ. ಅಷ್ಟೇ. ಅವು ಪುಸ್ತಕಗಳನ್ನು ಬರೆಯಲಾಗುವುದಿಲ್ಲ, ಭಾಷಣಗಳನ್ನು ಮಾಡಲಾಗುವುದಿಲ್ಲ, ಇರುವ ವ್ಯತ್ಯಾಸ ಅದೊಂದೇ. ಅದರೆ ನಾನು ಸಂಪೂರ್ಣವಾಗಿ ಆಶ್ಚರ್ಯಗೊಳಿಸುವ ವಿಷಯಗಳನ್ನು ನೋಡಿದ್ದೇನೆ ಮತ್ತು ಆ ಬಗೆಯ ಪ್ರೀತಿಸುವಿಕೆ ಪ್ರಾರಂಭವಾದ ಕೂಡಲೆ ಆ ಬಗೆಯ ಸ್ವ–ಕೊಟ್ಟುಕೊಳ್ಳುವಿಕೆ ಹಾಗೂ ಸ್ವ–ವಿಸ್ಮರಣೆ ಬರುತ್ತವೆ. ಆದರೆ ಪುರುಷರು, ನಾನು ಕೈಕೊಂಡ ಎಲ್ಲ ಅಭ್ಯಾಸದಿಂದ ನನ್ನಲ್ಲಿ ಉಂಟಾದ ನಂಬಿಗೆ ಏನೆಂದರೆ ಬಹುಶಃ ಪ್ರಾಣಿಗಳಲ್ಲಿ ಶ್ರೇಷ್ಠತರ ಪರಿಶುದ್ಧತೆ ಇರುತ್ತದೆ.

ಏಕೆಂದರೆ ಅವುಗಳಿಗೆ ಯೋಚಿಸಲು ಬರುವುದಿಲ್ಲ. ಅದು ಹಾಗಿರುವಾಗ ಮಾನವ ಸತ್ತೆಗಳು ತಮ್ಮ ಮಾನಸಿಕ ಸಾಮರ್ಥ್ಯ, ಚಿಂತನೆ ಮಾಡುವುದಕ್ಕೆ ತರ್ಕಮಾಡುವುದಕ್ಕೆ ವಿಶ್ಲೇಷಣೆ ಮಾಡುವುದಕ್ಕೆ ಅದೆಲ್ಲವನ್ನೂ ಅಭ್ಯಾಸ ಮಾಡುವುದಕ್ಕೆ ಇರುವ ಕ್ಷಮತೆ ಇವೆಲ್ಲವುಗಳಿಂದಾಗಿ ಅವರು ಅತ್ಯಂತ ಚೆಲುವಾದ ಚಲನೆಯನ್ನು ಹಾಳುಮಾಡುತ್ತಾರೆ. ಅವರು ಲೆಕ್ಕಾಚಾರ ಮಾಡಲು, ತರ್ಕಮಾಡಲು, ಸಂಶಯಪಡಲು, ಸಂಘಟಿಸಲು ಪ್ರಾರಂಭ ಮಾಡುತ್ತಾರೆ.

**(CWM, 6/106)** **– ಶ್ರೀಮಾತೆ**

*

**ಮಾತೆ ಮಗುವಿಗೆ ಅಂಟಿಕೊಂಡಿರುವುದಕ್ಕೆ ಪ್ರಾಪಂಚಿಕ ಆಧಾರ**

ಹಲವಾರು ಭ್ರಮೆಗಳನ್ನು ನಿಮ್ಮ ಪ್ರಜ್ಞೆಯಲ್ಲಿ ತೆಗೆದು ಹಾಕುವ ಅಪಾಯವನ್ನು ಕಂಡುಕೊಳ್ಳುತ್ತ ನಾನು ನಿಮಗೆ ಮಾತೆ ಮಗುವಿನೊಂದಿಗೆ ಹೊಂದಿರುವ ಪ್ರೀತಿಯ ಮೂಲಕ್ಕೆ ಕುರಿತಾದ ಏನೋ ಒಂದನ್ನು ಹೇಳಬೇಕು. ಅದು ಏಕೆಂದರೆ ಅವಳದೇ ದ್ರವ್ಯದಿಂದ, ಸಾಪೇಕ್ಷವಾಗಿ ದೀರ್ಘಕಾಲದವರೆಗೆ ಮಾತೆಯ ಕೊಂಡಿ ಅವಳು ಹಾಗೂ ಮಗುವಿನ ನಡುವೆ ಅತ್ಯಂತ ಹತ್ತಿರವಾಗಿರುತ್ತದೆ. ಅದು ಅವಳ ಮಾಂಸದ ತುಂಡನ್ನು ಕತ್ತರಿಸಿ ಹೊರಗೆ ತೆಗೆದು ದೂರದಲ್ಲಿರಿಸಿದ ಹಾಗಿರುತ್ತದೆ– ಮತ್ತು ಬಹಳ ದಿನಗಳ ನಂತರ ಅವರೀರ್ವರ ನಡುವಿರುವ ಗಂಟನ್ನು ಸಂಪೂರ್ಣವಾಗಿ ಕಡಿದು ಹಾಕಲಾಗಿರುತ್ತದೆ, ಅಲ್ಲಿ ಒಂದು ಬಗೆಯ ಗಂಟಿರುತ್ತದೆ. ಸೂಕ್ಷ್ಮಪ್ರಕಾರದ ಸಂವೇದನೆ, ಅದು ಹೇಗಿರುತ್ತದೆಯೆಂದರೆ ಮಗುವಿಗೆ ಬಂದ ಭಾವನೆಯನ್ನೇ ಮಾತೆ ತನ್ನಲ್ಲಿಯೆ ಬರುವ ಭಾವನೆಯ ಹಾಗೆ ನಿಖರವಾಗಿ ಹೊಂದಿರುತ್ತಾಳೆ ಅದು ಆಗ ಮಾತೆ ಮಗುವಿಗೆ ಅಂಟಿಕೊಂಡಿರುವುದಕ್ಕೆ ಪ್ರಾಪಂಚಿಕ ಆಧಾರ. ಅದು ಮಾತೆಯ ಮಗುವಿನೊಂದಿಗೆ.

ಪ್ರಾಪಂಚಿಕ ತಾದಾತ್ಮದೊಂದಿಗೆ ಇರುವುದಕ್ಕೆ ಆಧಾರ. ಅದಲ್ಲದೆ ಬೇರೆ ಯಾವುದೂ ಇರುವುದಿಲ್ಲ. ಭಾವನೆ ನಂತರ ಬರುತ್ತದೆ ಅದು ಬೇಗ ಬರಬಹುದು ಆದರೆ ಅದು ಜನರ ಮೇಲೆ ಅವಲಂಬಿಸಿರುತ್ತದೆ, ನಾನು ಬಹಳಷ್ಟು ಜನರಿಗೆ ಆಗುವುದನ್ನು ಕುರಿತು ಮಾತನಾಡುತ್ತಿದ್ದೇನೆ: ಭಾವನೆ ದೀರ್ಘಕಾಲದ ನಂತರ ಬರುತ್ತದೆ, ಅದು ಕಟ್ಟುನಿಟ್ಟಿಗೆ ಒಳಗಾಗಿರುತ್ತದೆ. ಅಲ್ಲಿ ಎಲ್ಲ ಬಗೆಯ ವಿಷಯಗಳಿವೆ... ಆ ವಿಷಯ ಕುರಿತು ಗಂಟೆಗಟ್ಟಲೆ ಮಾತನಾಡಬಲ್ಲೆ. ಆದರೆ ಇನ್ನೂ ಇದನ್ನು ಪ್ರೀತಿಯೊಂದಿಗೆ ಮಿಶ್ರಣಕ್ಕೊಳಪಡಿಸಬಾರದು. ಅದು ಪ್ರಾಪಂಚಿಕವಾಗಿ ಗುರುತಿಸುವಿಕೆ, ಮಾತೆ ಅದನ್ನು ಬಹಳ ಹತ್ತಿರದಿಂದ ಭಾವನೆ ತಂದುಕೊಳ್ಳುವಂತೆ ಮಾಡುತ್ತದೆ. ಮಗು ಯಾವ ಭಾವನೆಯನ್ನು ತಂದುಕೊಳ್ಳುತ್ತಿದೆ ಅದು ಪ್ರಾಪಂಚಿಕ ಗುರುತಿಸಿಕೊಳ್ಳುವಿಕೆಯಾಗಿದ್ದು ಮಾತೆ ಅದನ್ನು ಬಹಳ ಮೂರ್ತರೂಪದಲ್ಲಿ, ಸ್ಪರ್ಶವೇದ್ಯವಾಗುವಂತೆ ಭಾವನೆಗೆ ತಂದುಕೊಳ್ಳುತ್ತಾರೆ.



ಇದೇ ಆಧಾರ. ಉಳಿದದ್ದೆಲ್ಲ ಸ್ವಭಾವ, ಅದು ಅಭಿವೃದ್ಧಿ ಪ್ರಜ್ಞೆ, ಪ್ರಜ್ಞೆ, ಶಿಕ್ಷಣ, ಭಾವನೆಗಳನ್ನು ತಂದುಕೊಳ್ಳುವ ಸಾಮರ್ಥ್ಯ ಇವೆಲ್ಲವುಗಳ ಹಂತದಿಂದ ಬರುತ್ತದೆ.

**(CWM, 6/106–107)** **– ಶ್ರೀಮಾತೆ**

*

**ಮಕ್ಕಳನ್ನು ಸೇವಕರೊಡನೆ ಮತ್ತು ಯೋಗ್ಯವಲ್ಲದ ಸಮೂಹದೊಡನೆ ವ್ಯವಹಾರ ಮಾಡುವುದು**

**ಪ್ರಶ್ನೆ:** *ಕೆಲವೊಮ್ಮೆ ಹೀಗಾಗುತ್ತದೆ: ಮಾತೆ ತನ್ನ ಮಗುವಿಗೆ ಒಳ್ಳೆಯ ಶಿಕ್ಷಣ ಕೊಡುತ್ತಾಳೆ. ಆದರೆ ಸುತ್ತಲಿರುವ ಜನರು ಅದನ್ನು ಹಾಳುಮಾಡುತ್ತಾರೆ. ಆಗ ಮಾತೆ ಏನು ಮಾಡಬೇಕು?*

**ಶ್ರೀಮಾತೆ:** ಹೌದು, ಅದು ಪರಿಪೂರ್ಣವಾಗಿ ಸತ್ಯವಾದದ್ದು. ಪುರುಷರು ಅತ್ಯಂತ ಕೆಟ್ಟದಾದದ್ದನ್ನು, ಅಂದರೆ ಸೇವಕರೊಂದಿಗೆ ಮಕ್ಕಳನ್ನು ಬಿಟ್ಟುಕೊಡುವುದನ್ನು ಮಾಡುತ್ತಾರೆ. ಏಕೆಂದರೆ ಈ ಜನರಲ್ಲಿ ಒಟ್ಟಿನಲ್ಲಿ ಅಸಹ್ಯವಾದ ಪ್ರಜ್ಞೆಯಿರುತ್ತದೆ, ಒಟ್ಟಿನಲ್ಲಿ ಕೀಳತರಗತಿಯದು, ಮಬ್ಬಾದದ್ದು ಮತ್ತು ಬಹಳ ಸ್ವಯಂಪ್ರೇರಣೆ–ಯಿಂದ, ಅದನ್ನು ಕೈಕೊಳ್ಳಲು ಕಾದುಕೊಂಡಿರದೆ ಹಾಗೆ ಮಾಡಲು ಬಯಸದೆ ಅದು ಮಕ್ಕಳಲ್ಲಿ ಪ್ರವೇಶಿಸುವುದಕ್ಕೆ ಅನುವು ಮಾಡಿಕೊಡುತ್ತಾರೆ. ಸ್ವಾಭಾವಿಕವಾಗಿ, ಮಕ್ಕಳನ್ನು ಶಾಲೆಗೆ ಕಳಿಸುವುದಕ್ಕಾಗಿ ಅವರಿಗೆ ಒಂದು ವಯಸ್ಸಿರುತ್ತದೆ. ಅಲ್ಲಿ ಅವರು ಸಹವಾಸಕ್ಕೆ ಯೋಗ್ಯದಲ್ಲದ ಹಲವಾರು ಮಕ್ಕಳ ಸಂಪರ್ಕದಲ್ಲಿ ಬರಲು

ಪ್ರಾರಂಭಿಸುತ್ತಾರೆ. ಈ ಸಂಬಂಧಗಳಿಂದ ತಪ್ಪಿಸಿಕೊಳ್ಳುವುದು ಬಹಳ ಕಠಿಣವಾಗಿರುತ್ತದೆ. ಆದರೆ ಅದೇನೇ ಇರಲಿ, ಮನುಷ್ಯ ಜೀವನವನ್ನು ಸ್ವಲ್ಪ ಪ್ರಜ್ಞೆಯಿಂದ ಮತ್ತು ಸಾಕಷ್ಟು ಸದಿಚ್ಛೆಯಿಂದ ಪ್ರಾರಂಭಿಸಿದ್ದಾರೆ. ಅವನು ಯೋಗ್ಯರಲ್ಲದ ಜನರನ್ನು ಭೇಟಿ ಮಾಡಿದಾಗ ಅವನು ಅದನ್ನು ಭಾವನೆಗೆ ತಂದುಕೊಳ್ಳುತ್ತಾನೆ. ಮನುಷ್ಯ ಸದಿಚ್ಛೆಯುಳ್ಳವನಾಗಿದ್ದರೆ ಕೂಡಲೆ ಅವರನ್ನು ನೋಡದೆ ಇರಲು ಮತ್ತು ಅವರೊಂದಿಗೆ ಇರದೆ ಇರಲು ಪ್ರಯತ್ನಿಸುತ್ತಾನೆ.

**(CWM, 5/412–413)** **– ಶ್ರೀಮಾತೆ**

*

## ಜನ್ಮ ಹಾಗೂ ಚೈತ್ಯ ಸತ್ತೆ

### ಚೈತ್ಯ ಸತ್ತೆ ಆಯ್ದುಕೊಳ್ಳುವ ಭೌತಿಕ ಪರಿಸ್ಥಿತಿಗಳು ಹಾಗೂ ವಾತಾವರಣ

**ಪ್ರಶ್ನೆ:** *ಶ್ರೇಷ್ಠ ಆತ್ಮಗಳು ಪೃಥ್ವಿಯ ಮೇಲೆ ಜನ್ಮತಾಳಲು ಬಯಸಿದಾಗ ಅವು ತಮ್ಮ ತಂದೆ–ತಾಯಿಗಳನ್ನು ಆಯ್ದುಕೊಳ್ಳುತ್ತಿವೆಯೆ?*

**ಶ್ರೀಮಾತೆ:** ಅಹಾ! ಅದೆಲ್ಲ ಪ್ರಜ್ಞೆಯ ಮೇಲೆ, ಅದರ ರೂಪುತಾಳಿಕೊಳ್ಳುವಿಕೆಯ ಸ್ಥಿತಿಯ ಮೇಲೆ ಅವಲಂಬಿಸಿರುತ್ತದೆ. ಚೈತ್ಯಸತ್ತೆ ಸಂಪೂರ್ಣವಾಗಿ ರೂಪುಗೊಂಡಿದ್ದಾದರೆ, ಅದರ ಸತ್ತೆಯ ಪರಿಪೂರ್ಣ ಸ್ಥಿತಿಗೆ ತಲುಪಿದ್ದರೆ ಮರುಜನ್ಮ ತಾಳಬೇಕೋ ಬೇಡವೋ, ಮುಕ್ತವಾಗಿರಬೇಕೋ ಎಂಬುದನ್ನು ಆಯ್ದುಕೊಳ್ಳುವ ಕ್ಷಮತೆ ಅದಕ್ಕಿರುತ್ತದೆ. ಆದರೆ ಅದನ್ನು ನಿನಗೆ ವಿವರಿಸಿ ಹೇಳಿದ್ದೇನೆ ಎಂಬುದರಲ್ಲಿ ನಿನಗೆ ನಂಬಿಕೆಯಿದೆ. ಅವು ದೇಹಗಳಲ್ಲಿರದವರೆಗೆ ಅವುಗಳಿಗೆ ನಮ್ಮಿದ್ದ ಹಾಗೆ ಭೌತಿಕವಾಗಿ ನೋಡಲಾಗುವುದಿಲ್ಲ. ಹಾಗಾಗಿ, ಸ್ಪಷ್ಟವಾಗಿ, ಅವು ತಮ್ಮನ್ನು ಅಭಿವ್ಯಕ್ತಪಡಿಸಲು ಸರಿಹೊಂದಬಹುದಾದ ಯೋಗ್ಯ ದೇಹವೊಂದನ್ನು ಹುಡುಕುತ್ತವೆ, ಆದರೆ ಅವು ತಮ್ಮ ಪಾಲನ್ನು ಭೌತಿಕ ಅಪ್ರಜ್ಞೆಗೆ ಮತ್ತು ದೇಹದ ಅತ್ಯಂತ ಭೌತಿಕದ ಭಾಗಕ್ಕೆ ತಮ್ಮನ್ನು ಹೊಂದಿಸಿಕೊಳ್ಳುವುದಕ್ಕೆ ಕೊಡಬೇಕಾಗುತ್ತದೆ. ಹಾಗಾಗಿ ಚೈತ್ಯಸತ್ತೆಯ ದೃಷ್ಟಿಕೋನದಿಂದ ಅವನೆಲ್ಲಿ ಜನ್ಮತಾಳಬೇಕು ಎಂಬ ಮನುಷ್ಯನ ಆಯ್ದುಕೊಳ್ಳುವಿಕೆ ಮಹತ್ವದ್ದು, ಅದು ಪ್ರಾಮುಖ್ಯತೆಯಿಲ್ಲದ ವಿವರಕ್ಕಿಂತ ಹೆಚ್ಚಿನದು. ಮೊದಲೇ ನೋಡಲಾಗದ



ಹಲವಾರು ವಿಷಯಗಳಿರುತ್ತವೆ, ಉದಾಹರಣೆಗೆ ಮನುಷ್ಯ ಒಂದು ವಾತಾವರಣ, ದೇಶ ಒಂದು ಬಗೆಯ ಕುಟುಂಬ ಇವುಗಳನ್ನು ಆಯ್ದುಕೊಳ್ಳುತ್ತಾನೆ, ಆಗಲಿರುವ ತಂದೆತಾಯಿಗಳ ಸ್ವಭಾವವನ್ನು ಕುರಿತು ಪ್ರಶ್ನೆ ಮಾಡುತ್ತಾನೆ, ಈಗಾಗಲೆ ಅವರಲ್ಲಿ ಸರಿಯಾಗಿ ಅಭಿವೃದ್ಧಿ ಹೊಂದಿದ ಗುಣಲಕ್ಷಣಗಳನ್ನು ಹಾಗೂ ಸಾಕಷ್ಟಾಗಿರುವ ಸ್ವ–ಪ್ರಭುತ್ವವನ್ನು ನೋಡಲು ಪ್ರಯತ್ನಿಸುತ್ತಾನೆ, ಆದರೆ ಮನುಷ್ಯ ಅಡೆತಡೆಗಳ ಮೇಲೆ ಜಯಸಾಧಿಸಲು ತನ್ನಲ್ಲಿ ಸಾಕಷ್ಟು ಕ್ರಿಯಾಶೀಲತೆಯನ್ನು ಕೊಂಡೊಯ್ಯದಿದ್ದರೆ ಇದೆಲ್ಲ ಸಾಕಾಗದು. ಏನೇ ಆಗಲಿ, ಅತ್ಯಂತ ಒಳ್ಳೆಯದಾಗಿದ್ದಾಗಲೂ ಮತ್ತು ತಂದೆ–ತಾಯಿಗಳು ಪ್ರಜ್ಞಾಪೂರ್ವಕವಾಗಿ ಸಹಕಾರ ನೀಡಿದ್ದಾಗಲೂ ಅವಚೇತನದ ಮತ್ತು ಇನ್ನೂ ನಿಮ್ನಸ್ತರದ ಭವ್ಯ ರೀತಿಯ ಮೊತ್ತವಿರುತ್ತದೆ, ಅವು ಕಾಲಕಾಲಕ್ಕೆ ಮೇಲ್ಮೈಗೆ ಮೇಲೆದ್ದು ಬರುತ್ತವೆ, ಅಲುಗಾಡ ತೊಡಗುತ್ತವೆ, ಕಾರ್ಯವನ್ನು ಹಾಳುಮಾಡುತ್ತವೆ, ಸ್ಥಿರತೆ ಹಾಗೂ ನಿಶ್ಚಲನೀರವತೆ ಅನಿವಾರ್ಯವಾಗುವಂತೆ ಮಾಡುತ್ತವೆ. ಮನುಷ್ಯ ಆಯ್ದುಕೊಂಡಿದ್ದಾಗಲೂ, ಯಾವಾಗಲೂ ದೀರ್ಘರೀತಿಯ ತಯಾರು ಮಾಡಿಕೊಳ್ಳುವುದರ ಆವಶ್ಯಕತೆಯಿರುತ್ತದೆ. ಜನ್ಮತಾಳುವ ಹಾಗೂ ದೇಹದಲ್ಲಿ ಇಳಿದುಬರುವ ಕ್ಷಣದಲ್ಲಿ ದಿಗ್ಭ್ರಾಂತಿಗೊಳಗಾಗುವ ಗೋಚರ ಸಂಗತಿಯನ್ನು ಕುರಿತು ಹೇಳುವುದಷ್ಟೇ ಬೇಡ, ಅದರಿಂದ ಪೂರ್ತಿ ತಪ್ಪಿಸಿಕೊಳ್ಳಲು ಬಹಳ ಕಾಲ ಬೇಕಾಗುತ್ತದೆ.

**(CWM, 5/410–411)** **– ಶ್ರೀಮಾತೆ**

*

### ಚೈತ್ಯ ಆಯ್ದುಕೊಳ್ಳಬಲ್ಲದು, ಆದರೆ ಭೌತಿಕ ಜಗತ್ತಿನಲ್ಲಿ ಇಳಿದು ಬರಲು ನಿಜವಾಗಿ ಗ್ರಹಿಸಬಲ್ಲವರನ್ನು ಅರಸುತ್ತದೆ

**ಪ್ರಶ್ನೆ:** *ಜಗತ್ತಿನಲ್ಲಿ ಚೈತ್ಯ ಪ್ರವೇಶ ಮಾಡುತ್ತಿರುವ ಸಮಯದಲ್ಲಿ ಮುಂಚಿತ–ವಾಗಿಯೇ ಅದು ತೆಗೆದುಕೊಳ್ಳಬೇಕಾದ ರೂಪವನ್ನು ಆಯ್ದುಕೊಳ್ಳುತ್ತದೆಯೆ?*

**ಶ್ರೀಮಾತೆ:** ಅದು ಸ್ವಾರಸ್ಯಕರವಾದ ಪ್ರಶ್ನೆ. ಅದು ಅವಲಂಬಿಸಿರುತ್ತದೆ. ತಯಾರು ಮಾಡಿಕೊಳ್ಳುತ್ತಿರುವ, ಪ್ರಗತಿಸಾಧಿಸುತ್ತಿರುವ ಹಂತದಲ್ಲಿರುವ ಚೈತ್ಯಸತ್ತೆಗಳಿರುತ್ತವೆ, ಅವು ಪ್ರಾರಂಭದ ದೆಶೆಯಲ್ಲಿಯೇ, ಸರ್ವಸಾಧಾರಣವಾಗಿ ಇವು ಬಹಳಷ್ಟನ್ನು ಆಯ್ದುಕೊಳ್ಳಲಾಗುವುದಿಲ್ಲ, ಆದರೆ ಅವು ಬೆಳವಣಿಗೆಯ ಹಾಗೂ ಪ್ರಜ್ಞೆಯ

ಒಂದು ವಿಶಿಷ್ಟ ದರ್ಜೆಯನ್ನು ತಲುಪಿದಾಗ (ಸರ್ವಸಾಧಾರಣವಾಗಿ ಅವಿನ್ನೂ ಭೌತಿಕ ದೇಹದಲ್ಲಿದ್ದಾಗ ಮತ್ತು ಸ್ವಲ್ಪ ಮಟ್ಟಿಗಿನ ಅನುಭವವನ್ನು ಹೊಂದಿದಾಗ) ಆ ಸಮಯದಲ್ಲಿ ಮುಂದಿನ ಅನುಭವದ ಕ್ಷೇತ್ರ ಯಾವುದಾಗಿರಬೇಕೆಂಬುದನ್ನು ನಿರ್ಧರಿಸುತ್ತವೆ.

ನಾನು ಹೆಚ್ಚಾಗಿ ಬಾಹ್ಯ ಉದಾಹರಣೆಗಳನ್ನು ನಿಮಗೆ ಕೊಡಬಲ್ಲೆ. ಉದಾಹರಣೆಗೆ ಚೈತ್ಯ ಸತ್ತೆಯೊಂದಕ್ಕೆ ಪ್ರಭುತ್ವದ, ಸಾಮರ್ಥ್ಯದ ಆವಶ್ಯಕತೆಯನ್ನು ಕಂಡುಕೊಂಡರೆ ಅದರಿಂದಾಗಿ ಪ್ರತಿಕ್ರಿಯೆಗಳನ್ನುತಿಳಿದುಕೊಳ್ಳಬಹುದು ಮತ್ತು ಈ ಎಲ್ಲ ಚಲನೆಗಳನ್ನು ಭಗವಂತನತ್ತ ಹೊರಳಿಸಲು ಹೇಗೆ ಸಾಧ್ಯವಾಗಬಹುದು: ಸಾಮರ್ಥ್ಯವಿರುವ ಜೀವನ ನಿಮಗೆ ಕಲಿಸಿಕೊಡಬಹುದಾದುದನ್ನು ತಿಳಿದುಕೊಳ್ಳಬಹುದು. ಅದು ರಾಜನಲ್ಲಿ ಇಲ್ಲವೆ ರಾಣಿಯಲ್ಲಿ ಜನ್ಮತಾಳಿತು. ಇವರು ಸ್ವಲ್ಪ ಸಾಮರ್ಥ್ಯದ ಸಂತೋಷ ಪಡೆದರು, ಆ ಸಮಯದಲ್ಲಿ ಅವರ ಅನುಭವಗಳಾದವು. ಅವರು ಅನುಭವದ ಕ್ಷೇತ್ರದ ಕೊನೆಯನ್ನು ತಲುಪಿದರು. ಈಗ ಅವರು ತಿಳಿದುಕೊಳ್ಳಲು ಬಯಸಿದ್ದನ್ನು ತಿಳಿದುಕೊಂಡಿದ್ದಾರೆ, ಅವರು ಹೊರಟುಹೋಗುವವರಿದ್ದಾರೆ, ಅವರು ತಮ್ಮ ಉಪಯೋಗಕ್ಕೆ ಬಾರದ ದೇಹವನ್ನು ಬಿಟ್ಟುಕೊಡುವವರಿದ್ದಾರೆ, ಮತ್ತು ಮುಂದಿನ ಅನುಭವಕ್ಕಾಗಿ ತಯಾರು ಮಾಡಿಕೊಳ್ಳುವವರಿದ್ದಾರೆ. ಸರಿ, ಆ ಸಮಯದಲ್ಲಿ ಚೈತ್ಯಸತ್ತೆ ಇನ್ನೂ ದೇಹದಲ್ಲಿದ್ದಾಗ, ಅದು ಕಲಿತದ್ದನ್ನು ಗಮನಿಸಿದಾಗ ಅದು ಮುಂದಿನ ಸಂದರ್ಭವನ್ನು ನಿರ್ಧರಿಸುತ್ತದೆ. ಕೆಲವೊಮ್ಮೆ ಅದು ಕ್ರಿಯೆ ಹಾಗೂ ಪ್ರತಿಕ್ರಿಯೆಗಳ ಚಲನೆಯಾಗಿರುತ್ತದೆ; ಏಕೆಂದರೆ ಕೆಲವೊಮ್ಮೆ ಅದು ಒಂದು ಕ್ರಿಯೆ ಹಾಗೂ ಪ್ರತಿಕ್ರಿಯೆಗಳ ಚಲನೆಯಾಗಿರುತ್ತದೆ; ಏಕೆಂದರೆ ಅದು ಒಂದು ಕ್ಷೇತ್ರವನ್ನು ಇಡಿಯಾಗಿ ಅಭ್ಯಾಸ ಮಾಡಿರುತ್ತದೆ, ಅದಕ್ಕೆ ವಿರುದ್ಧವಾದ ಕ್ಷೇತ್ರದ ಆವಶ್ಯಕತೆ ಇರುತ್ತದೆ. ಬಹಳಷ್ಟು ಸಲ ಅದು ಜೀವಿಸಿದ್ದಕ್ಕಿಂತ ಅತಿ ಭಿನ್ನವಾದ ಜೀವನವನ್ನು ಆಯ್ದುಕೊಳ್ಳುತ್ತದೆ. ಹಾಗಾಗಿ ದೇಹವನ್ನು ಬಿಟ್ಟುಕೊಟ್ಟು ಹೋಗುವಾಗ "ನಾನು ಈ ಕ್ಷೇತ್ರದಲ್ಲಿ ಜೀವಿಸುವೆ" ಎಂದು ಹೇಳುತ್ತದೆ. ಉದಾಹರಣೆಗೆ ಚೈತ್ಯ ಬೆಳವಣಿಗೆಯ ಒಂದು ಹಂತವನ್ನು ತಲುಪಿದೆ ಎಂದು ಭಾವಿಸೋಣ, ಆಗ ಅದಕ್ಕೆ ಭೌತಿಕ ದೇಹದ ಮೇಲೆ ಕಾರ್ಯಕೈಕೊಳ್ಳುವುದಕ್ಕೆ ಅವಕಾಶವಿರುತ್ತದೆ, ಅದರಿಂದಾಗಿ ಅದನ್ನು ಪ್ರಜ್ಞಾಪೂರ್ವಕವಾಗಿ ಭಗವಂತನೊಡನೆ ಸಂಪರ್ಕ



ದೊರಕಿಸಲು ಮತ್ತು ಪರಿವರ್ತನೆಗೆ ಒಳಪಡಿಸಲು ಸಾಮರ್ಥ್ಯ ಹೊಂದುವಂತಾಗುತ್ತದೆ. ಅಧಿಕಾರ, ಸಾಮರ್ಥ್ಯ ಹಾಗೂ ಚಟುವಟಿಕೆಗಳಿದ್ದ, ದೇಹವನ್ನು ಬೆಳವಣಿಗೆಗಾಗಿ ಉಪಯೋಗಿಸಿದ್ದ, ಈಗ ಬಿಟ್ಟುಕೊಟ್ಟು ಹೋಗುವುದಿದೆ. ಅದು ಹೇಳುತ್ತದೆ "ಮುಂದಿನ ಸಲ ನಾನು ತಟಸ್ಥ ವಾತಾವರಣದಲ್ಲಿ ಜನ್ಮ ತಾಳುವೆ, ಅದು ಕೀಳುಸ್ತರದ್ದಾಗಿರುವುದಿಲ್ಲ ಇಲ್ಲವೆ ಉಚ್ಚಸ್ತರದ್ದಾಗಿರುವುದಿಲ್ಲ. ಅಲ್ಲಿ (ಅದನ್ನು ನಾನು ಹೇಗೆ ಹೇಳಲಿ) ಉಚ್ಚಮಟ್ಟದ ಬಾಹ್ಯ ಜೀವನದ ಆವಶ್ಯಕತೆ ಇರುವುದಿಲ್ಲ. ಮನುಷ್ಯನಿಗೆ ಶ್ರೇಷ್ಠ ಸಾಮರ್ಥ್ಯವಿರುವುದಿಲ್ಲ ಇಲ್ಲವೆ ಭವ್ಯ ದುಃಖವಿರುವುದಿಲ್ಲ– ಒಟ್ಟಿನಲ್ಲಿ ನಡುವಿರುವ ಹಾಗೆ ತಟಸ್ಥವಾಗಿರುತ್ತದೆ." ಅದನ್ನು ಅದು ಆಯ್ದುಕೊಳ್ಳುತ್ತದೆ. ಅದು ಅವಶ್ಯವಾದ ಅದರ ವಿಶ್ರಾಂತಿಗಾಗಿ, ಗಳಿಸಿದ ಅನುಭವವನ್ನು ಜೀರ್ಣಿಸಿಕೊಳ್ಳುವುದಕ್ಕಾಗಿ ಮತ್ತು ಭವಿಷ್ಯತ್ತನ್ನು ತಯಾರು ಮಾಡುವುದಕ್ಕಾಗಿ ತನ್ನ ಚೈತ್ಯ ಲೋಕಕ್ಕೆ ಮರಳಿ ಹೋಗಬೇಕಾಗುತ್ತದೆ. ಅದು ಮತ್ತೊಮ್ಮೆ ಕೆಳಗಿಳಿದು, ಬರುವುದಕ್ಕಿಂತ ಮೊದಲು, ತನ್ನ ಜೀರ್ಣಿಸಿಕೊಳ್ಳುವಿಕೆಯನ್ನು ಮುಗಿಸಿದಾಗ, ಭವಿಷ್ಯತ್ತಿನ, ಅದು ಮರಳಿಬರುವುದಕ್ಕೆ ಕಾಲ ಸನ್ನಿಹಿತವಾದಾಗ, ಪೃಥ್ವಿಯ ಮೇಲೆ ಬರಲು, ಸ್ವಾಭಾವಿಕವಾಗಿ ತನ್ನ ಆಯ್ಕೆಯನ್ನು ನೆನಪಿಗೆ ತಂದುಕೊಳ್ಳುತ್ತದೆ, ಆ ಪ್ರಾಂತದಿಂದ ಅದು ಭೌತಿಕ ವಸ್ತುಗಳನ್ನು ನಾವು ನೋಡುವ ಹಾಗೆ ನೋಡಲಾಗುವುದಿಲ್ಲ: ಅವು ಬೇರೆ ರೂಪದಲ್ಲಿ ಕಾಣಿಸಿಕೊಳ್ಳುತ್ತವೆ. ಆದಾಗ್ಯೂ ಇನ್ನೂ ವ್ಯತ್ಯಾಸವನ್ನು ಪೂರ್ವಭಾವಿಯಾಗಿ ನೋಡಬಹುದು: ವಾತಾವರಣದಲ್ಲಿ ವ್ಯತ್ಯಾಸ, ಆ ವಾತಾವರಣದಲ್ಲಾಗುವ ಕ್ರಿಯೆಯಲ್ಲಿನ ವ್ಯತ್ಯಾಸ ಇವು ಸ್ಪಷ್ಟವಾಗಿ ಕಂಡು ಬರುತ್ತವೆ, ಬಹಳ ರೀತಿಯಲ್ಲಿ ಗ್ರಹಿಕೆಗೆ ಬರುತ್ತವೆ, ವಿಶ್ವವ್ಯಾಪಕವಾದ ದೃಷ್ಟಿಯನ್ನು ಅದು ಹೊಂದಬಲ್ಲದು. ಅದು ಆಯ್ದುಕೊಳ್ಳಬಹುದು. ಅದಕ್ಕೆ ಒಂದು ಬಗೆಯ ಶಿಕ್ಷಣ, ನಾಗರಿಕತೆ, ಪ್ರಭಾವ ಅದಕ್ಕೆ ಬೇಕಾದಾಗ ಆ ದೇಶವನ್ನು ಮೊದಲೇ ಆಯ್ದುಕೊಳ್ಳಬಹುದು. ಕೆಲವೊಮ್ಮೆ ಅದು ಮಾಡಿಕೊಳ್ಳಲಾರದು ಕೆಲವೊಮ್ಮೆ ಅದರ ವಾತಾವರಣವನ್ನು ಅದು ನಡೆಸಲಿರುವ ಜೀವನದ ಬಗೆಯನ್ನು ಆಯ್ದುಕೊಳ್ಳುತ್ತದೆ ಮತ್ತು ಆಗ ಅಲ್ಲಿ ಮೇಲ್ಗಡೆಯಿಂದ ಅದು ಬಯಸುವ ಕಂಪನಗಳಿಗಾಗಿ ನೋಡುತ್ತದೆ, ಅವುಗಳನ್ನು ಅದು ಸ್ಪಷ್ಟವಾಗಿ ನೋಡುತ್ತದೆ. ಅದು ಬೀಳಲಿರುವ ಸ್ಥಳವನ್ನು ಗುರಿಯಾಗಿಸಿಕೊಂಡಿರುವಂತಿರುತ್ತದೆ. ಆದರೆ ಅದು ಸರಿಸಮಾನವಾದದ್ದು, ಏಕೆಂದರೆ ಇನ್ನೊಂದು ಪರಿಸ್ಥಿತಿ ಇರುವ

ವಾಸ್ತವತೆಯ ಆವಶ್ಯಕತೆ ಇರುತ್ತದೆ. ಕೇವಲ ಅದರ ಆಯ್ಕೆಯಲ್ಲ, ಕೆಳಗಿನಿಂದ ಗ್ರಹಿಸುವಿಕೆ ಹಾಗೂ ಅಭೀಪ್ಸೆಗಳು ಇರಬೇಕಾಗುತ್ತದೆ. ಸಾಕಷ್ಟು ಸಹಿಸಿಕೊಂಡು ಹೋಗುವಿಕೆ, ತೆರೆದಿರಿಸಿಕೊಂಡಿರುವಿಕೆ ಇಲ್ಲವೆ ಉಚ್ಚತರವಾದ ಏನೋ ಒಂದಕ್ಕೆ ಪ್ರಜ್ಞಾಪೂರ್ಣ ಅಭೀಪ್ಸೆ ಇರಬೇಕಾಗುತ್ತದೆ. ಅದು ಚೈತ್ಯಸತ್ತೆಗಾಗಿ ಒಂದು ಚಿಕ್ಕ ಪ್ರಕಾಶವನ್ನು ಹೊತ್ತಿಸುತ್ತದೆ. ಅದು ಜನ್ಮತಾಳಲು ಬಯಸುವ ವಾತಾವರಣವನ್ನು ಪ್ರತಿನಿಧಿಸುವ ಮೊತ್ತದಲ್ಲಿ ತನ್ನದೇ ಪ್ರಕ್ಷೇಪಿಸಿದ ಸಂಕಲ್ಪದ ಪ್ರಭಾವದಿಂದ ಚಿಕ್ಕಪ್ರಕಾಶವೊಂದು ಹೊತ್ತಿಕೊಳ್ಳುತ್ತದೆ, ಆಗ ಅದು ತಾನೆಲ್ಲಿಗೆ ಹೋಗಬೇಕು ಎಂಬುದನ್ನು ತಿಳಿದುಕೊಂಡಿರುತ್ತದೆ.

ಅದು ಅವಶ್ಯವಾಗಿರುತ್ತದೆ, ಇದೇ ತಿಂಗಳುಗಳಲ್ಲಿ ಇಲ್ಲವೆ ದಿನಗಳಲ್ಲಿ ಬಹುಶಃ ವರ್ಷಗಳಲ್ಲಿ ಅಷ್ಟೊಂದಾಗಲಿಕ್ಕಿಲ್ಲ, ಹಾಗಿದ್ದಾಗ್ಯೂ ಅದು ಅನಿಶ್ಚಿತತೆಯನ್ನು ಸೃಷ್ಟಿಸುತ್ತದೆ, ಆ ಕಾರಣದಿಂದಾಗಿಯೆ ಅದು ನಿಖರವಾದ ದಿನಾಂಕವನ್ನು ಮೊದಲೇ ಹೇಳಲಾಗುವುದಿಲ್ಲ: "ಆ ದಿನಾಂಕದಂದು, ಆ ದಿನದಂದು ಆ ಗಳಿಗೆಯಲ್ಲಿ ಜನ್ಮ ತಾಳುವೆ." ಗ್ರಹಿಸಬಲ್ಲ ಯಾರಾದರೊಬ್ಬರನ್ನು ಕಂಡುಕೊಳ್ಳಬೇಕಾದ ಆವಶ್ಯಕತೆ ಇರುತ್ತದೆ. ಅದನ್ನು ನೋಡಿದಾಗ ಅದು ರಭಸದಿಂದ ಕೆಳಗಿಳಿದು ಬರುತ್ತದೆ. ಸಂಭವಿಸುವುದು ಒಂದು ಪ್ರತೀಕದಂತಿರುತ್ತದೆ: ನಿಖರವಾಗಿ ಅದೇ ಅಲ್ಲ, ಆದರೆ ಅದರಂತಹದೇ ಇರುವುದಾಗಿರುತ್ತದೆ. ಅದು ಅಪ್ರಜ್ಞೆಯಲ್ಲಿ ತನ್ನನ್ನು ಚೆಲ್ಲಿಕೊಡುತ್ತದೆ, ಏಕೆಂದರೆ ಭೌತಿಕ ಜಗತ್ತು, ಮಾನವ ಅಪ್ರಜ್ಞೆ ಅದೇನೇ ಇರಲಿ, ಚೈತ್ಯಸತ್ತೆಗೆ ಹೋಲಿಸಿದರೆ ಬಹಳ ಅಪ್ರಜ್ಞೆಯದಾಗಿರುತ್ತದೆ. ಹೀಗೆ ಅದು ಅಪ್ರಜ್ಞೆಯಲ್ಲಿ ರಭಸದಿಂದ ಹೋಗುತ್ತದೆ. ಇನ್ನು ಮುಂದೆ ತಾನು ಎಲ್ಲಿದ್ದೇನೆ ಇಲ್ಲವೆ ಏನನ್ನು ಮಾಡುತ್ತಿದ್ದೇನೆ, ಇಲ್ಲವೆ ಅದು ಅಲ್ಲೇಕಿದೆ ಎಂಬುದೆನ್ನುವುದನ್ನು, ಹೀಗೆ ಏನನ್ನೂ ತಿಳಿದುಕೊಳ್ಳುವುದಿಲ್ಲ. ತನ್ನನ್ನು ಅಭಿವ್ಯಕ್ತಗೊಳಿಸುವುದರಲ್ಲಿ ಭವ್ಯ ತೊಂದರೆಯನ್ನು ಕಂಡುಕೊಳ್ಳುತ್ತದೆ, ವಿಶೇಷವಾಗಿ, ಸ್ವಾಭಾವಿಕವಾಗಿ ಮಿದುಳಿಲ್ಲದ ಕೂಸಿನ ಮೂಲಕ, ಇನ್ನೂ ಹೆಚ್ಚಿನ ರೀತಿಯಲ್ಲಿ ರೂಪುಗೊಂಡಿರದ ಭ್ರೂಣ (embryo)ವನ್ನು ಹಾಗೂ ತನ್ನನ್ನು ಅಭಿವ್ಯಕ್ತಿಗೊಳಿಸಲು, ತನ್ನನ್ನು ಪ್ರಕಟಿಸುವ ಅಂಶಗಳನ್ನು ಹೊಂದಿರುವ ಅಂಗಗಳು ಅದಕ್ಕಿರುವುದಿಲ್ಲ. ಹಾಗಾಗಿ ಮಗುವೊಂದು ತನ್ನಲ್ಲಿ ಒಳಗೊಂಡಿರುವ ಅಸಾಧಾರಣ ಸತ್ತೆಯೊಂದನ್ನು ಕೂಡಲೆ ಪ್ರಕಟಿಸುವುದು



ಅಪರೂಪಕ್ಕೆ ಕಂಡುಬರುತ್ತದೆ. ಅದು ಸಂಭವಿಸುತ್ತದೆ. ಇಂತಹ ವಿಷಯಗಳನ್ನು ನಾವು ಕೇಳಿದ್ದೇವೆ. ಅದು ಸಂಭವಿಸುತ್ತದೆ, ಆದರೆ, ಸರ್ವಸಾಧಾರಣವಾಗಿ, ಸ್ವಲ್ಪ ಸಮಯದ ಆವಶ್ಯಕತೆ ಇರುತ್ತದೆ. ಕೇವಲ ಅದು ತನ್ನ ಸಂವೇದನಾರಹಿತ ಸ್ಥಿತಿಯಿಂದ ನಿಧಾನಗತಿಯಲ್ಲಿ ಎಚ್ಚತ್ತುಗೊಳ್ಳುತ್ತದೆ, ಯಾವುದೊಂದು ಕಾರಣದಿಂದ ಮತ್ತು ಆಯ್ಕೆಯಿಂದ ಅದು ಅಲ್ಲಿರುವುದರ ಬಗ್ಗೆ ಅರಿವುಳ್ಳದ್ದಾಗುತ್ತದೆ. ಇದು ಗಾಢಮಟ್ಟದ ಮಾನಸಿಕ ಶಿಕ್ಷಣದೊಂದಿಗೆ ಏಕವಾಗುತ್ತದೆ, ಅದು ನಿಮ್ಮನ್ನು ಚೈತ್ಯಸತ್ತೆಯ ಪ್ರಜ್ಞೆಯಿಂದ ಸಂಪೂರ್ಣವಾಗಿ ಮುಚ್ಚಿಡುತ್ತದೆ. ಹಾಗಾಗಿ ಪರಿಸ್ಥಿತಿಗಳ ಮೊತ್ತ, ಎಲ್ಲ ಬಗೆಯ ಘಟನೆಗಳು, ಮನೋವಿಕಾರಗಳು, ಎಲ್ಲ ಬಗೆಯ ವಿಷಯಗಳು ಆಂತರಿಕ ದ್ವಾರವನ್ನು ತೆರೆಯಲು ಅವಶ್ಯವಾಗಿರುತ್ತವೆ. ಅದರಿಂದಾಗಿ ಮನುಷ್ಯ ಒಟ್ಟಿನಲ್ಲಿ ತಾನು ಇನ್ನೊಂದು ಲೋಕದಿಂದ ಮತ್ತು ಒಂದು ವಿಶಿಷ್ಟ ಕಾರಣಕ್ಕಾಗಿ ಬಂದಿದ್ದೇನೆ ಎಂಬುದನ್ನು ನೆನಪಿಗೆ ತಂದುಕೊಳ್ಳುವುದನ್ನು ಪ್ರಾರಂಭಿಸಬಹುದು.

ಹಾಗಿರದೆ ಇದ್ದಾಗ, ಎಲ್ಲವೂ ಸಾಮಾನ್ಯ ರೀತಿಯಲ್ಲಿ ನಡೆದು ಹೋದರೆ ಅದು ತೀವ್ರಗತಿಯಲ್ಲಿ ಸಂಪರ್ಕವನ್ನು ಪಡೆಯಬಹುದು, ಸ್ವಲ್ಪ ಜ್ಞಾನವನ್ನು ವಶದಲ್ಲಿಟ್ಟುಕೊಂಡಿರುವ ಯಾರಾದರೊಬ್ಬರನ್ನು ಕಂಡುಕೊಳ್ಳುವ ಸುದೈವ ಅದಕ್ಕಿದ್ದರೆ ಅಜ್ಞಾನವಿರುವ ಜಗತ್ತಿನಲ್ಲಿ ಬೀಳುವುದರ ಬದಲಾಗಿ ಸ್ವಲ್ಪ ಜ್ಞಾನವಿದ್ದಲ್ಲಿ ಬಿದ್ದರೆ ಎಲ್ಲವನ್ನೂ ಬಹಳ ಶೀಘ್ರಗತಿಯಿಂದ ಮಾಡಲಾಗುವುದು.

**(CWM, 5/213–15)** **– ಶ್ರೀಮಾತೆ**

*

**ಜನ್ಮ, ಅವಚೇತನದಲ್ಲಿ ಆಳವಾಗಿ ಬೇರುಬಿಟ್ಟ ಗುರುತುಗಳು ಮನುಷ್ಯನ ಚಾರಿತ್ರ್ಯವನ್ನು ಪರಿವರ್ತನೆಗೊಳಪಡಿಸುವುದರ ರಹಸ್ಯವಾಗಿರುತ್ತದೆ.**

**ಪ್ರಶ್ನೆ:** *ಜನ್ಮತಾಳುವುದರೊಂದಿಗೆ ಪ್ರಾಣಿಕ ವಿರೂಪಗೊಂಡಿರುತ್ತದೆಯೆ?*

**ಶ್ರೀಮಾತೆ:** ನಿಮ್ಮ ಜನ್ಮ ಆಕಸ್ಮಿಕವಾಗಿ ಆಗಿರಲಿಲ್ಲವೆಂದರೆ, ಅಲ್ಲಿ, ವಿರೂಪವಿರುವುದಿಲ್ಲ ಎಂದು ಸರಿಯಾಗಿ ಯೋಚಿಸಬಹುದು. ಆದರೆ ನಿಮ್ಮ ಜನ್ಮ ತಾಳುವಾಗ ಏನಾಗಿರುತ್ತೀರೋ, ಬಹಳಷ್ಟು ಸಲ ಬಹುಮಟ್ಟಿಗೆ ಸಂಪೂರ್ಣವಾಗಿ ನಿಮ್ಮ ತಂದೆತಾಯಿಗಳು ನಿಮ್ಮನ್ನು ಏನು ಮಾಡಿರುವರೋ ಅದಾಗಿರುತ್ತೀರಿ ಮತ್ತು

ಹಾಗೆಯೇ ಅವರ ಮೂಲಕ ನಿಮ್ಮ ಮುತ್ತಜ್ಜರು ನಿಮ್ಮನ್ನು ಏನು ಮಾಡಿರುತ್ತಾರೋ ಅದಾಗುವಿರಿ. ಕೆಲವೊಂದು ಕುಟುಂಬಗಳಲ್ಲಿ ಪ್ರಾಣಿಕ ಸಂಪ್ರದಾಯಗಳಿರುತ್ತವೆ, ಅದಲ್ಲದೆ ನಿಮ್ಮನ್ನು ರೂಪಿಸಿದಾಗ, ಹೆತ್ತಾಗ ಪ್ರಜ್ಞೆಯ ಒಂದು ಹಂತವಿರುತ್ತದೆ ಮತ್ತು ಅದು ಲಕ್ಷಾನುಗಟ್ಟಲೆ ಸಂದರ್ಭಗಳಲ್ಲಿ ಒಮ್ಮೆಯೂ ಕೂಡ ನಿಜವಾದ ಅಭೀಪ್ಸೆಗೆ ಅನುಗುಣವಾಗಿ ಮಾಡಲಾಗುವುದಿಲ್ಲ ಮತ್ತು ನಿಜವಾದ ಅಭೀಪ್ಸೆ ಮಾತ್ರ ನಿಮ್ಮ ಪ್ರಾಣಿಕದ ಮಿಶ್ರಣದಿಂದ ಅದನ್ನು ಪರಿಶುದ್ಧಗೊಳಿಸಬಹುದು ಮತ್ತು ಪ್ರಾಣಿಕ ಅಂಶ ಸತ್ತೆ ಪರಿಶುದ್ಧ ಅಂಶವಾಗುತ್ತ ಆಕರ್ಷಣೆಗೆ ಒಳಗಾಗಬಹುದು, ಅದು ಎಲ್ಲ ಸಂಸರ್ಗದಿಂದ ಮುಕ್ತವಾಗಿರುತ್ತದೆ. ನಾನು ಹೇಳುವುದರ ಅರ್ಥ ಅಲ್ಲಿ ಪ್ರಾಣಿಕ ಸತ್ತೆಯೊಂದು ಪ್ರವೇಶಿಸಿದರೆ ಅದು ತನ್ನ ಅನುಕೂಲಕರ ಬೆಳವಣಿಗೆಗಾಗಿ ಅಂಶಗಳನ್ನು ಒಟ್ಟುಗೂಡಿಸಬಹುದು; ಅದಿದ್ದ ಹಾಗಿರುವ ಜಗತ್ತಿನಲ್ಲಿ, ಎಲ್ಲ ವಿಷಯಗಳು ಎಲ್ಲ ರೀತಿಯಲ್ಲಿ ಎಷ್ಟೊಂದು ಮಿಶ್ರಣಕ್ಕೊಳಗಾಗಿವೆಯೆಂದರೆ ಪ್ರಾಣಿಕದ ಅಂಶಗಳು ಸಾಕಷ್ಟು ಪರಿಶುದ್ಧವಾಗಿ ಇರುವಂತೆ ಹೊಂದುವುದು ಬಹುಮಟ್ಟಿಗೆ ಅಸಾಧ್ಯವಾಗಿರುತ್ತದೆ, ಇತರ ಸಂಸರ್ಗಕ್ಕೊಳಗಾದ ಸತ್ತೆಗಳಿಂದ ಸಂಸರ್ಗಕ್ಕೊಳಗಾಗದೆ ಇರುವುದು ಸಾಧ್ಯವಾಗುವುದಿಲ್ಲ.

ನಾನೀಗಾಗಲೆ ಅದರ ಬಗ್ಗೆ ಮಾತನಾಡಿದ್ದೇನೆ ಎಂದು ನನಗನಿಸುತ್ತದೆ. ಜನ್ಮವಾಗುವುದಕ್ಕಿಂತ ಮೊದಲು ತಂದೆತಾಯಿಗಳಲ್ಲಿ ಯಾವ ಬಗೆಯ ಅಭೀಪ್ಸೆ ಇರಬೇಕು ಎಂಬುದರ ಬಗ್ಗೆ ಹೇಳಿದ್ದೇನೆ, ಆದರೆ ನಾನು ಹೇಳಿದ ಹಾಗೆ ಇದು ನೂರು ಸಾವಿರ ಉದಾಹರಣೆಗಳಲ್ಲಿ ಸಂಭವಿಸಿಲ್ಲ. ಸಂಕಲ್ಪಮಾಡಿ ಮಗುವಿಗೆ ಜನ್ಮಕೊಡುವುದು ಬಹಳ ಅಪರೂಪ, ಅದು ಹೆಚ್ಚಾಗಿ ಒಂದು ಆಕಸ್ಮಿಕ ಘಟನೆಯಾಗಿರುತ್ತದೆ. ಅನೇಕ ಜನರ ಮಧ್ಯದಲ್ಲಿ ಮಗು ಏನಾಗುತ್ತದೆ ಎಂಬುದರ ತಲೆಕೆಡಿಸಿಕೊಂಡವರು ಬಗ್ಗೆ ತಿಳಿದುಕೊಂಡವರು ಅಲ್ಪ ಸಂಖ್ಯೆಯಲ್ಲಿರುತ್ತಾರೆ. ಮಗು ಯಾವುದರ ಮೇಲೆ ಅವಲಂಬಿಸಿರುತ್ತದೆ, ತಾವು ಏನಾಗಿದ್ದೇವೆ ಎಂಬುದನ್ನು ಕೂಡ ಅವರು ತಿಳಿದುಕೊಳ್ಳುವುದಿಲ್ಲ. ಗಣ್ಯರ ಚಿಕ್ಕ ಸಂಖ್ಯೆ ಇದನ್ನು ತಿಳಿದುಕೊಂಡಿರುತ್ತದೆ. ಬಹಳಷ್ಟು ಸಲ ವಿಷಯಗಳು ಅವಿದ್ದ ಹಾಗೆ ಸಾಗಲು ಸಾಧ್ಯವಿರುವಂತೆ ಹೋಗುತ್ತವೆ. ಏನು ಬೇಕಾದರೂ ಸಂಭವಿಸಬಹುದು, ಏನು ಸಂಭವಿಸಬಹುದು, ಏನು ಸಂಭವಿಸುತ್ತದೆ, ಎಂಬುದರ ಬಗೆ ಅರಿವನ್ನು ಕೂಡ



ಹೊಂದಿರುವುದಿಲ್ಲ. ಹಾಗಾಗಿ ಈ ಪರಿಸ್ಥಿತಿಗಳಲ್ಲಿ ನಿಮಗೆ ಸಹಾಯ–ಮಾಡುವುದಕ್ಕಾಗಿ ಸಾಕಷ್ಟು ಪರಿಶುದ್ಧವಾದ ಪ್ರಾಣಿಕ ಸತ್ತೆ ಜನಿಸುವುದೆಂದು ಹೇಗೆ ನಿರೀಕ್ಷಿಸುತ್ತೀರಿ? ಮನುಷ್ಯ ಜೀವಿಸುವುದಕ್ಕಿಂತ ಮೊದಲು ಪೊರೆಯೊಂದನ್ನು ಸ್ವಚ್ಛ ಮಾಡುವುದಕ್ಕಾಗಿ, ಜನ್ಮತಾಳುತ್ತಾನೆ. ಆಂತರಿಕ ಪರಿವರ್ತನೆಗಾಗಿ ಮಾರ್ಗದಲ್ಲಿ ಒಳ್ಳೆಯ ಪ್ರಾರಂಭ ಮಾಡಿದರೆ, ಸತ್ತೆಯ ಅವಚೇತನದ ಬೇರಿನ ಕೆಳಗಡೆ ಹೋದರೆ ಅದು ನಿಖರವಾಗಿ ಅದು ಪೂರ್ವಜರ ಸಾದೃಶ್ಯದಿಂದ ಬರುತ್ತದೆ– ಸರಿ ಅದೇನಿದೆ ಎಂಬುದನ್ನು ನೋಡುತ್ತೀರಿ. ಬಹುಮಟ್ಟಿಗೆ ಎಲ್ಲ ತೊಂದರೆಗಳು ಅಲ್ಲಿರುತ್ತವೆ. ಜೀವನದ ಮೊದಲ ವರ್ಷಗಳ ನಂತರ ಅಸ್ತಿತ್ವಕ್ಕೆ ಬಹಳ ಕಡಿಮೆ ವಿಷಯಗಳನ್ನು ಅಧಿಕವಾಗಿಸಲಾಗಿರುತ್ತದೆ. ಇದು ಯಾವುದೆ ಅಡ್ಡ ಕ್ಷಣದಲ್ಲಿ ಸಂಭವಿಸುತ್ತದೆ. ನೀವು ಕೆಟ್ಟವರ ಸಹವಾಸದಲ್ಲಿದ್ದರೆ, ಕೆಟ್ಟ ಪುಸ್ತಕಗಳನ್ನು ಓದಿದರೆ ವಿಷ ನಿಮ್ಮಲ್ಲಿ ಪ್ರವೇಶಿಸಬಹುದು. ಆದರೆ ಅವಚೇತನದ ಆಳದಲ್ಲಿ ಬೇರೂರಬಿಟ್ಟ ಎಲ್ಲ ಬಗೆಯದು ನೀವು ಹೋರಾಡಬೇಕಾದ ಕೊಳಕು ರೂಢಿಗಳಿರುತ್ತವೆ. ಉದಾಹರಣೆಗೆ ಸುಳ್ಳನ್ನು ಹೇಳದೆ ತಮ್ಮ ಬಾಯನ್ನು ತೆರೆಯಲಾಗದ ಜನರಿರುತ್ತಾರೆ, ಇದನ್ನು ಅವರು ಯಾವಾಗಲೂ ಉದ್ದೇಶಪೂರ್ವಕವಾಗಿ ಮಾಡುವುದಿಲ್ಲ (ಅದು ಬಹಳ ಕೆಟ್ಟದಾದ್ದು) ಇಲ್ಲವೆ ಇತರರೊಡನೆ ಜಗಳ ಮಾಡದೆ ಇತರರೊಡನೆ ಸಂಪರ್ಕದಲ್ಲಿ ಬರಲಾರರು, ಎಲ್ಲ ಬಗೆಯ ಮೂರ್ಖತನಗಳಿರುತ್ತವೆ– ಅವು ಅವಚೇತನದ ಆಳದಲ್ಲಿ ಬೇರುಬಿಟ್ಟಿರುತ್ತವೆ. ನಿಮ್ಮಲ್ಲಿ ಸದಿಚ್ಛೆಯಿದ್ದಾಗ, ಅದೆಲ್ಲದರಿಂದ ತಪ್ಪಿಸಿಕೊಳ್ಳಲು ನಿಮಗೆ ಹೆಚ್ಚು ಒಳ್ಳೆಯದೆನಿಸುವಷ್ಟನ್ನು ಕೈಕೊಂಡಾಗ, ನೀವು ಕಾರ್ಯ ಮಾಡುತ್ತೀರಿ, ಹೋರಾಡುತ್ತೀರಿ, ನಂತರ ಈ ವಿಷಯ ಯಾವಾಗಲೂ ಮೇಲೆದ್ದು ಬರುತ್ತದೆ ಎಂಬುದರ ಬಗ್ಗೆ ಅರಿವುಳ್ಳವರಾಗುತ್ತೀರಿ, ಅದು ನಿಮ್ಮ ನಿಯಂತ್ರಣದಿಂದ ತಪ್ಪಿಸಿಕೊಳ್ಳುವ ಯಾವುದೋ ಭಾಗದಿಂದ ಬರುತ್ತದೆ. ನಿಮ್ಮ ಅವಚೇತನದಲ್ಲಿ ಪ್ರವೇಶಿಸಿದರೆ, ಅದರಲ್ಲಿ ನಿಮ್ಮ ಪ್ರಜ್ಞೆ ಒಳಹರಿಯುವುದಕ್ಕೆ ಅನುವು ಮಾಡಿಕೊಟ್ಟರೆ ಮತ್ತು ಲಕ್ಷ್ಯಗೊಟ್ಟು ನೋಡಿದರೆ, ನೀವು ಕ್ರಮೇಣ ನಿಮ್ಮ ತೊಂದರೆಗಳ ಎಲ್ಲ ಉಗಮ ಸ್ಥಾನಗಳನ್ನು ಶೋಧಿಸುತ್ತೀರಿ. ಆಗ ನೀವು ನಿಮ್ಮ ತಂದೆಯರು ಹಾಗೂ ತಾಯಿಯರು, ಮುತ್ತಜ್ಜರು ಹಾಗೂ ಮುತ್ತಜ್ಜಿಯರು ಏನಾಗಿದ್ದರು ಎಂಬುದನ್ನು ತಿಳಿದುಕೊಳ್ಳಲು ಪ್ರಾರಂಭಿಸುತ್ತೀರಿ ಮತ್ತು ಒಂದು ಕ್ಷಣ ನಿಮ್ಮನ್ನು ನೀವು ನಿಯಂತ್ರಣದಲ್ಲಿ ಇರಿಸಿಕೊಳ್ಳಲಾಗದೇ ಹೋದಾಗ "ನಾನು ಹಾಗಿದ್ದೇನೆ, ಏಕೆಂದರೆ ಅವರು ಹಾಗಿದ್ದರು" ಎಂಬುದನ್ನು ತಿಳಿದುಕೊಳ್ಳುತ್ತೀರಿ.

ನಿಮ್ಮ ಮೇಲೆ ಗಮನವಿರಿಸಲು, ನಿಮ್ಮ ಮಾರ್ಗವನ್ನು ತಯಾರು ಮಾಡಲು ನಿಮ್ಮೊಳಗೆ ಸಾಕಷ್ಟು ಎಚ್ಚತ್ತುಕೊಂಡ ಚೈತ್ಯಸತ್ತೆಯಿದ್ದರೆ ಅದು ನಿಮಗೆ ಸಹಾಯ ಮಾಡಲು ಎಲ್ಲ ವಿಷಯಗಳನ್ನು ಎಂದರೆ ಜನರನ್ನು, ಪುಸ್ತಕಗಳನ್ನು, ಪರಿಸ್ಥಿತಿಗಳನ್ನು ನಿಮ್ಮತ್ತ ಎಳೆದುತರಬಹುದು, ಯಾವುದೋ ಉಪಕಾರಿಬುದ್ಧಿಯ ಸಂಕಲ್ಪ ತಂದ ಹಾಗಿರುವ ಎಲ್ಲ ಬಗೆಯ ಚಿಕ್ಕ ಏಕಕಾಲೀನತೆ (coincidence)ಗಳು ಬರುತ್ತವೆ. ಅವು ನಿಮಗೆ ಸೂಚನೆಯನ್ನು, ಸಹಾಯವನ್ನು, ನಿರ್ಧಾರ ಕೈಕೊಳ್ಳುವುದಕ್ಕೆ ಆಧಾರಗಳನ್ನು ತರಬಹುದು ಮತ್ತು ನಿಮ್ಮನ್ನು ಸರಿಯಾದ ದಿಶೆಯಲ್ಲಿ ಹೊರಳಿಸಬಹುದು. ಆದರೆ ಒಮ್ಮೆ ನೀವು ಈ ನಿರ್ಧಾರವನ್ನು ಕೈಕೊಂಡಾಗ, ನಿಮ್ಮ ಸತ್ತೆಯ ಸತ್ಯವನ್ನು ಕಂಡುಕೊಳ್ಳಬೇಕೆಂದು ನಿರ್ಧರಿಸಿದಾಗ ಮತ್ತು ನಿಷ್ಕಪಟರಾಗಿ ಆ ಮಾರ್ಗದ ಮೇಲೆ ಸಾಗಲು ಪ್ರಾರಂಭಿಸಿದಾಗ ನೀವು ಮುನ್ನಡೆದುಕೊಂಡು ಹೋಗಲು ಎಲ್ಲವೂ ಸಹಾಯ ಮಾಡಲು ತಂತ್ರ ರೂಪಿಸಿರುವಂತೆ ತೋರಿಬರುತ್ತದೆ ಮತ್ತು ನೀವು ಲಕ್ಷ್ಯಗೊಟ್ಟು ಅವಲೋಕನ ಮಾಡಿದರೆ ಕ್ರಮೇಣ ನಿಮ್ಮ ತೊಂದರೆಗಳ ಉಗಮವನ್ನು ನೋಡುತ್ತೀರಿ: “ಅಹಾ! ಒಂದು ನಿಮಿಷ ಕಾದುಕೊಂಡಿರಿ, ಈ ದೋಷ ನಮ್ಮ ತಂದೆಯಲ್ಲಿತ್ತು, ಓಹ್ ಈ ರೂಢಿ ನಮ್ಮ ತಾಯಿಯದು, ಓಹ್ ನಮ್ಮ ಮುತ್ತಜ್ಜ ಹೀಗಿದ್ದಳು, ನಮ್ಮ ಮುತ್ತಜ್ಜ ಹಾಗಿದ್ದ,” ಇಲ್ಲವೆ ನೀವು ಚಿಕ್ಕವರಾಗಿದ್ದಾಗ ನಿಮ್ಮ ಕಾಳಜಿ ಮಾಡುತ್ತಿದ್ದ ದಾದಿಯಲ್ಲಿದ್ದಿರಬಹುದು. ನಿಮ್ಮೊಡನೆ ಆಟವಾಡಿದ ಸಹೋದರ ಸಹೋದರಿಯಲ್ಲಿ ನೀವು ಭೇಟಿ ಮಾಡಿದ ಚಿಕ್ಕ ವಯಸ್ಸಿನ ಮಿತ್ರರಲ್ಲಿದ್ದಿರಬಹುದು ಮತ್ತು ಇದೆಲ್ಲವೂ ಆ ವ್ಯಕ್ತಿಯಲ್ಲಿ ಇಲ್ಲವೆ ಈ ವ್ಯಕ್ತಿಯಲ್ಲಿ ಇತ್ತೆಂಬುದನ್ನು ಕಂಡುಕೊಳ್ಳುವಿರಿ. ಆದರೆ ನೀವು ನಿಷ್ಕಪಟರಾಗಿರುವುದನ್ನು ಮುಂದುವರಿಸಿಕೊಂಡು ಹೋದರೆ ಇದೆಲ್ಲವನ್ನೂ ಬಹಳ ಸ್ಥಿರತೆಯಿಂದ ದಾಟಿ ಹೋಗಬಲ್ಲಿರಿ ಎಂಬುದನ್ನು ಕಂಡುಕೊಳ್ಳುತ್ತೀರಿ ಮತ್ತು ಸ್ವಲ್ಪ ಸಮಯದ ನಂತರ ನೀವು ಜನ್ಮದೊಂದಿಗೆ ತೆಗೆದುಕೊಂಡು ಬಂದಿದ್ದ ಎಲ್ಲ ಲಂಗರುಗಳನ್ನು, ಸರಪಣಿಗಳನ್ನು ಮುರಿದು ಹಾಕುತ್ತೀರಿ ಮತ್ತು ಮಾರ್ಗದ ಮೇಲೆ ಮುಕ್ತರಾಗಿ ಸಾಗುತ್ತೀರಿ.

ನಿಮ್ಮ ಚಾರಿತ್ರ್ಯವನ್ನು ಪರಿವರ್ತನೆಗೆ ಒಳಪಡಿಸಲು ಬಯಸಿದರೆ ಅದನ್ನೇ ನೀವು ಕೈಕೊಳ್ಳಬೇಕು. ಮನುಷ್ಯನ ಸ್ವಭಾವವನ್ನು ಬದಲು ಮಾಡುವುದು ಅಸಾಧ್ಯ



ಎಂದು ಯಾವಾಗಲೂ ಹೇಳಲಾಗಿದೆ. ಆ ಹೇಳಿಕೆ ತತ್ವಶಾಸ್ತ್ರದ, ಹಾಗೆಯೇ ಯೋಗ ಕುರಿತು ಇರುವ ಪುಸ್ತಕಗಳಲ್ಲಿ ಅದೇ ಬಗೆಯ ಕತೆಯಂತಿದೆ. “ನಿಮ್ಮ ಚಾರಿತ್ರ್ಯವನ್ನು ನೀವು ಬದಲು ಮಾಡಲಾರಿರಿ, ನೀವು ಆ ರೀತಿ ಜನ್ಮ ತಾಳುತ್ತೀರಿ, ನೀವು ಹಾಗಿರುತ್ತೀರಿ” ಇದು ಸಂಪೂರ್ಣವಾಗಿ ಮಿಥ್ಯೆಯಾದದ್ದು, ಅದು ಮಿಥ್ಯೆ ಎಂಬುದಕ್ಕೆ ನಾನು ಗ್ಯಾರಂಟೀ ಕೊಡುತ್ತೇನೆ, ಆದರೆ ನಿಮ್ಮ ಚಾರಿತ್ರ್ಯವನ್ನು ಬದಲಾಯಿಸುವುದಕ್ಕೆ ಬಹಳ ಕಠಿಣವಾದ ಏನೋ ಒಂದಿದೆ, ಏಕೆಂದರೆ ಅದು ನಿಮ್ಮ ಚಾರಿತ್ರ್ಯವನ್ನು ಬದಲಾಯಿಸುವುದಿರುವುದಿಲ್ಲ, ಆದರೆ ನಿಮ್ಮ ಪೂರ್ವದಲ್ಲಿರುವುವಗಳ ಚಾರಿತ್ರ್ಯವನ್ನು ಬದಲಾಯಿಸುವುದಿರುತ್ತದೆ. ಅವುಗಳಲ್ಲಿ ಆ ಬದಲಾವಣೆಯನ್ನು ನೀವು ಮಾಡಲಾರಿರಿ. (ಏಕೆಂದರೆ ಅವುಗಳಲ್ಲಿ ಆ ಉದ್ದೇಶವಿರುವುದಿಲ್ಲ) ಆದರೆ ನಿಮ್ಮಲ್ಲಿಯೇ ಆ ಬದಲಾವಣೆಯನ್ನು ಮಾಡಬೇಕಾಗಿರುತ್ತದೆ. ಅದನ್ನೇ ಅವು ನಿಮಗೆ ಕೊಟ್ಟಿರುತ್ತವೆ, ನಿಮ್ಮ ಜನ್ಮಕಾಲದಲ್ಲಿ ನಿಮಗೆ ಕೊಡಲಾದ ಸೊಗಸಾದ ಕಾಣಿಕೆಗಳಾಗಿರುತ್ತವೆ. ಇದನ್ನೇ ಬದಲು ಮಾಡಬೇಕಾಗಿರುತ್ತದೆ. ಆದರೆ ಈ ವಿಷಯಗಳ ನಿಜವಾದ ಎಳೆಯನ್ನು ಹಿಡಿದುಕೊಳ್ಳುವುದರಲ್ಲಿ ನೀವು ಯಶಸ್ವಿಯಾದರೆ, ಅದರ ಮೇಲೆ ಪಟ್ಟುಹಿಡಿಯುವಿಕೆಯನ್ನು ಹಾಗೂ ನಿಷ್ಕಪಟತನವನ್ನು ಇರಿಸಿ ಕಾರ್ಯ ಕೈಕೊಂಡುದುದರಿಂದಾಗಿ ಒಂದು ದಿನ ಬೆಳಿಗ್ಗೆ ನೀವು ಮುಕ್ತರಾಗಿರುತ್ತೀರಿ. ಇದೆಲ್ಲವೂ ಬಿಟ್ಟು ನಿಮ್ಮಿಂದ ದೂರ ಹೋಗಿರುತ್ತದೆ ಮತ್ತು ಜೀವನದಲ್ಲಿ ಭಾರವಿಲ್ಲದ ಇನ್ನೊಂದು ಸುರುವಾತನ್ನು ದೊರಕಿಸಲು ಶಕ್ತರಾಗಿರುತ್ತೀರಿ. ಆಗ ನೀವು ಹೊಸ ಮನುಷ್ಯರಾಗಿರುತ್ತೀರಿ, ಬಹು ಮಟ್ಟಿಗೆ ಹೊಸ ಸ್ವಭಾವದೊಂದಿಗೆ ಹೊಸ ಜೀವನವನ್ನು ಜೀವಿಸುತ್ತಿರುತ್ತೀರಿ ಮತ್ತು ನೀವು ಹಿಂತಿರುಗಿ ನೋಡಿದರೆ “ಅದು ಸಾಧ್ಯವಿಲ್ಲ, ನಾನು ಎಂದೂ ಹಾಗಿರಲಿಲ್ಲ” ಎಂದು ಹೇಳುವಿರಿ.

**(CWM, 4/260–62)** – ಶ್ರೀಮಾತೆ

*

**ಚೈತ್ಯಸತ್ತೆ: ಉತ್ಕ್ರಾಂತಿಯ ಒಂದು ಪರಿಣಾಮ**

ಚೈತ್ಯಸತ್ತೆ ಉತ್ಕ್ರಾಂತಿಯ ಪರಿಣಾಮದಿಂದಾಗಿರುತ್ತದೆ, ಎಂದರೆ ದೈವೀ ಪ್ರಜ್ಞೆಯ ಉತ್ಕ್ರಾಂತಿ ಭೌತದ್ರವ್ಯದಲ್ಲಿ ಹರಡಿಕೊಳ್ಳುತ್ತದೆ ಮತ್ತು ನಿಧಾನ ಗತಿಯಿಂದ ಚೈತ್ಯಸತ್ತೆಯನ್ನು ಮೇಲಕ್ಕೆತ್ತಿ ಹಿಡಿಯುತ್ತದೆ, ಭಗವಂತನತ್ತ ಮರಳಿ

ಹೋಗುವುದಕ್ಕೆ ಅದು ಅಭಿವೃದ್ಧಿ ಹೊಂದುವಂತೆ ಮಾಡಲಾಗುತ್ತದೆ. ಈ ದೈವೀ ಕೇಂದ್ರದಿಂದ ಪ್ರಗತಿಪರವಾಗಿ ಚೈತ್ಯಸತ್ತೆಯನ್ನು ಈ ಎಲ್ಲ ಜನ್ಮಗಳಾದ್ಯಂತ ಕ್ರಮೇಣ ರೂಪಿಸಲಾಗುತ್ತದೆ.

**(CWM, 5/263–64)** – ಶ್ರೀಮಾತೆ

*

**ಚೈತ್ಯ ಒಂದು ದೇಹದಿಂದ ಇನ್ನೊಂದು ದೇಹಕ್ಕೆ ದಾಟಿಕೊಂಡು ಹೋಗುವುದು ಜನ್ಮ**

ಮರಳಿ ಜನ್ಮ ತಾಳುವುದು ಬಾಹ್ಯ ಸತ್ತೆಯಲ್ಲ, ಎಂದರೆ ತಂದೆ ತಾಯಿಗಳಿಂದ, ವಾತಾವರಣದಿಂದ, ಪರಿಸ್ಥಿತಿಗಳಿಂದ ರೂಪಿಸಿದ್ದಾಗಲಿ– ಮಾನಸಿಕ, ಪ್ರಾಣಿಕ, ಭೌತಿಕಗಳಿಂದ ರೂಪಿಸಿದ್ದಾಗಲಿ ಅಲ್ಲ. ಕೇವಲ ಚೈತ್ಯಸತ್ತೆ ಒಂದು ದೇಹದಿಂದ ಇನ್ನೊಂದು ದೇಹಕ್ಕೆ ಸಾಗಿ ಹೋಗುತ್ತದೆ. ತರ್ಕಬದ್ಧವಾಗಿ ಆಗ ಮಾನಸಿಕವಾಗಲಿ, ಭೌತಿಕವಾಗಲಿ ಗತಕಾಲದ ಜನ್ಮಗಳನ್ನು ನೆನಪಿಸಿಕೊಳ್ಳಲಾರವು ಇಲ್ಲವೆ ಗತಕಾಲದ ಜನ್ಮವನ್ನು ಆ ಹಿಂದಿನ ಆ ವ್ಯಕ್ತಿಯಲ್ಲಿ ಇಲ್ಲವೆ ಈ ವ್ಯಕ್ತಿಯಲ್ಲಿ ಇಲ್ಲವೆ ಅವನ ಚಾರಿತ್ರ್ಯದಲ್ಲಿ ಹಾಗೂ ರೀತಿಯಲ್ಲಿ ಗುರುತಿಸಲಾರದು. ಚೈತ್ಯಸತ್ತೆ ಮಾತ್ರ ನೆನಪಿನಲ್ಲಿಟ್ಟುಕೊಳ್ಳಬಹುದು. ನಾವು ನಮ್ಮ ಚೈತ್ಯಸತ್ತೆಯ ಅರಿವನ್ನು ಹೊಂದುವುದರ ಮೂಲಕ, ಅದೇ ಸಮಯದಲ್ಲಿ ನಮ್ಮ ಗತಕಾಲದ ಜನ್ಮಗಳ ಬಗ್ಗೆ ಭಾವನೆ ತಂದುಕೊಳ್ಳಬಹುದು.

ಅಲ್ಲದೆ ನಮ್ಮ ಲಕ್ಷ್ಯವನ್ನು ನಾವೇನಾಗಿದ್ದೆವೋ ಎಂಬುದರ ಮೇಲೆ ಇರಿಸುವುದಕ್ಕಿಂತ ನಾವೇನಾಗಬಯಸುತ್ತೇವೆಯೋ ಅದರ ಮೇಲೆ ಸ್ಥಿರಗೊಳಿಸುವುದು ಹೆಚ್ಚು ಮಹತ್ವದ್ದು.

**(CWM, 15/124)** – ಶ್ರೀಮಾತೆ

*

**ಚೈತ್ಯಸತ್ತೆ: ಸತ್ತೆಯ ಎಲ್ಲ ಭಾಗಗಳನ್ನು ಅದರ ಪ್ರಭಾವದಡಿಯಲ್ಲಿ ಇರಿಸುವುದರ ಮಹತ್ವ**

**ಪ್ರಶ್ನೆ:** *ಮನಸ್ಸು, ಪ್ರಾಣಿಕ, ಇಲ್ಲವೆ ಭೌತಿಕ ಮರುಜನ್ಮ ತಾಳದಿದ್ದರೆ, ಕೇವಲ ಚೈತ್ಯಸತ್ತೆ ಜನ್ಮತಾಳುತ್ತಿದ್ದರೆ, ಆಗ ಮೊದಲು ಸಾಧಿಸಿದ ಪ್ರಾಣಿಕ ಇಲ್ಲವೆ ಮಾನಸಿಕ ಪ್ರಗತಿ ಇನ್ನೊಂದು ಜನ್ಮದಲ್ಲಿ ಯಾವ ಮೌಲ್ಯವನ್ನೂ ಹೊಂದಿರುವುದಿಲ್ಲವೆ?*



**ಶ್ರೀಮಾತೆ:** ಅದು ಈ ಭಾಗಗಳ ಪ್ರಗತಿ ಅವುಗಳನ್ನು ಚೈತ್ಯಸತ್ತೆಯ ಹತ್ತಿರ ತಂದ ಮಟ್ಟಿಗೆ ಎಂದರೆ ಪ್ರಗತಿ ಸತ್ತೆಯ ಎಲ್ಲ ಭಾಗಗಳನ್ನು ಒಂದರ ನಂತರ ಒಂದರಂತೆ ಚೈತ್ಯಸತ್ತೆಯ ಪ್ರಭಾವದಡಿಯಲ್ಲಿ ಇರಿಸಿದ ಮಟ್ಟಿಗೆ ಸಂಭವಿಸುತ್ತದೆ. ಏಕೆಂದರೆ ಚೈತ್ಯದ ಪ್ರಭಾವದಡಿಯಲ್ಲಿರುವ ಎಲ್ಲವೂ, ಚೈತ್ಯದೊಡನೆ ಗುರುತಿಸಿಕೊಂಡದ್ದೆಲ್ಲವೂ ಮಾತ್ರ ಮುಂದುವರಿದುಕೊಂಡು ಹೋಗುತ್ತದೆ. ಆದರೆ ಮನುಷ್ಯ ಚೈತ್ಯಸತ್ತೆಯನ್ನು ತನ್ನ ಜೀವನದ ಹಾಗೂ ಪ್ರಜ್ಞೆಯ ಕೇಂದ್ರವನ್ನಾಗಿ ಮಾಡಿಕೊಂಡಿದ್ದರೆ ಮತ್ತು ಇಡೀ ಸತ್ತೆ ಅದರ ಸುತ್ತ ಸಂಘಟಿತವಾಗಿದ್ದರೆ, ಇಡೀ ಸತ್ತೆ ಚೈತ್ಯಸತ್ತೆಯ ಪ್ರಭಾವದಡಿಯಲ್ಲಿ ಸಾಗಿ ಹೋಗುತ್ತಿದ್ದರೆ ಅದು ಅದರೊಡನೆ ಏಕವಾಗುತ್ತದೆ ಮತ್ತು ಮುಂದುವರಿದುಕೊಂಡು ಹೋಗಬಲ್ಲದು– ಅದಕ್ಕೆ ಅವಶ್ಯವೆನಿಸಿದರೆ ಮುಂದುವರಿದುಕೊಂಡು ಹೋಗುವುದು. ನಿಜವಾಗಿ ಭೌತಿಕ ದೇಹಕ್ಕೆ ಅದೇ ಚಲನೆಯನ್ನು, ಪ್ರಗತಿಯ ಅದೇ ಚಲನೆಗಳನ್ನು, ಆರೋಹಣ ಮಾಡಲು ಚೈತ್ಯಸತ್ತೆಗೆ ಇರುವ ಸಾಮರ್ಥ್ಯವನ್ನು ಕೊಡಬಹುದಾದರೆ– ಸರಿ ದೇಹ ವಿಘಟಿತವಾಗುವ ಆವಶ್ಯಕತೆ ಇರುವುದಿಲ್ಲ. ಆದರೆ ಇರುವ ತೊಂದರೆ ಅದೇ ಆಗಿದೆ ಮತ್ತು ಚೈತ್ಯಸತ್ತೆಯ ಸಂಪರ್ಕದಲ್ಲಿ ಇರುವುದು ಮಾತ್ರ ಉಳಿದುಕೊಳ್ಳುತ್ತದೆ. ಅದು ಮಾತ್ರ ನೆನಪಿನಲ್ಲಿಟ್ಟುಕೊಳ್ಳಬಹುದು, ಏಕೆಂದರೆ ಉಳಿದದ್ದು ಮಾಯವಾಗುತ್ತದೆ ಅದು ಚಿಕ್ಕ ತುಂಡುಗಳಾಗಿ ಕರಗಿ ಹೋಗುತ್ತದೆ, ಬೇರೆ ಎಲ್ಲೆಡೆಯಲ್ಲೆಯೋ ಉಪಯೋಗಕ್ಕೆ ಬರುತ್ತದೆ, ಅದು ದೇಹ ಮತ್ತೆ ಧೂಳಿನಲ್ಲಿ ಕರಗಿಹೋಗಿ ಬೇರೆಡೆ ಉಪಯೋಗಕ್ಕೆ ಬರುವ ರೀತಿಯದಾಗಿರುತ್ತದೆ. ಅದು ಮರಳಿ ಪೃಥ್ವಿಗೆ ಹೋಗುತ್ತದೆ, ಸಸ್ಯಗಳು ಮಣ್ಣನ್ನು ಉಪಯೋಗಿಸುತ್ತವೆ, ಜನರು ಸಸ್ಯಗಳನ್ನು ತಿನ್ನುತ್ತಾರೆ. ಈ ರೀತಿಯಲ್ಲಿ ಅದು ನಡೆದು ಹೋಗುತ್ತಿರುತ್ತದೆ ಮತ್ತು ನಂತರ ಪೃಥ್ವಿಗೆ ಮರಳಿಬರುತ್ತದೆ ಮತ್ತೆ ಪ್ರಾರಂಭಿಸುತ್ತದೆ.

**(CWM, 5/358–59)** – ಶ್ರೀಮಾತೆ

*

**ಮರು ಅವತಾರಗಳನ್ನು ಕುರಿತು, ಮೃತ್ಯುವಿನ ಸಮಯದಲ್ಲಿ ಇರುವ ಪ್ರಜ್ಞೆಯ ಹಂತವನ್ನು ಕುರಿತು**

**ಪ್ರಶ್ನೆ:** *ಮುಂದಿನ ಜೀವನದಲ್ಲಿ ಆತ್ಮ ಜನ್ಮತಾಳಲು ಅದರ ಸ್ಥಳವನ್ನು ಆಯ್ದುಕೊಳ್ಳುವ ಇಚ್ಛೆಗೆ ಅವಕಾಶವಿರುತ್ತದೆಯೆ?*

**ಶ್ರೀಮಾತೆ:** ಸರಿ, ಅವರು ಯಾವ ಸ್ಥಿತಿಯಲ್ಲಿ ಮರಣ ಹೊಂದಿದರು, ಅವರ ಕೊನೆಯ ಇಚ್ಛೆ ಏನಾಗಿತ್ತು, ಅವರ ಚೈತ್ಯಸತ್ತೆಯ ನಿರ್ಧಾರ ಏನಾಗಿತ್ತು ಎಂಬುದರ ಮೇಲೆ ಸಂಪೂರ್ಣವಾಗಿ ಅವಲಂಬಿಸಿರುತ್ತದೆ. ಅದು ಯಾಂತ್ರಿಕವಾದದ್ದಲ್ಲ, ಮೇಲೆ ಹೇರಿದ್ದಾಗಿರುವುದಿಲ್ಲ, ಅದು ಪ್ರತಿಯೊಬ್ಬನಿಗೂ ಭಿನ್ನವಾಗಿರುತ್ತದೆ.

ಮೃತ್ಯುವಿನ ನಂತರ ಅನುಸರಿಸಿ ಬರುವ ಅದೃಷ್ಟಕ್ಕೆ, ಸಾಮಾನ್ಯವಾಗಿ ಪ್ರಜ್ಞೆಯ ಕೊನೆಯ ಹಂತ ಬಹಳ ಮಹತ್ವದ್ದೆಂದು ನಾನು ಹಲವಾರು ಸಲ ನಿಮಗೆ ಹೇಳಿದ್ದೇನೆ ಎಂದರೆ ಮರಣದ ಸಮಯದಲ್ಲಿ ಮನುಷ್ಯ ತನ್ನ ಕಾರ್ಯವನ್ನು ಮುಂದುವರಿಸಿಕೊಂಡು ಹೋಗಬೇಕೆಂಬ ಗಾಢ ಅಭೀಪ್ಸೆ ಹೊಂದಿದ್ದರೆ ಅದನ್ನು ಮಾಡಲಾಗುವ ಪರಿಸ್ಥಿತಿಗಳನ್ನು ವ್ಯವಸ್ಥೆಗೆ ಒಳಪಡಿಸಲಾಗುವುದು. ಮರಣದ ನಂತರ ಸಂಭವಿಸುವ ಎಲ್ಲ ಸಾಧ್ಯತೆಗಳು ಅಲ್ಲಿವೆ. ಚೈತ್ಯಸತ್ತೆಗೆ ಮರಳಿ ಹೋಗುವ ಜನರಿದ್ದಾರೆ ಬಾಹ್ಯ ಸತ್ತೆಯನ್ನು ಅಪರೂಪಕ್ಕೆ ಕಾಪಾಡಿಕೊಂಡು ಬರಲಾಗುತ್ತದೆ, ಹಾಗಾಗಿ ನಿಜವಾಗಿ ಯಾವಾಗಲೂ ಪಟ್ಟುಹಿಡಿದು ಉಳಿದುಕೊಳ್ಳುವ ಚೈತ್ಯಪ್ರಜ್ಞೆಯನ್ನು ಕುರಿತು ಮಾತನಾಡುತ್ತೇನೆ. ತಮಗಾಗಿರುವ ಅನುಭವವನ್ನು ಜೀರ್ಣಿಸಿಕೊಳ್ಳಲು ಮತ್ತು ಮುಂದಿನ ಜೀವನವನ್ನು ತಯಾರು ಮಾಡಲು ಚೈತ್ಯಪ್ರಾಂತಕ್ಕೆ ಮರಳಿ ಹೋಗುವ ಜನರಿದ್ದಾರೆ. ಇದಕ್ಕೆ ಶತಮಾನಗಳೇ ಬೇಕಾಗಬಹುದು, ಅದು ಜನರ ಮೇಲೆ ಅವಲಂಬಿಸಿರುತ್ತದೆ.

ಚೈತ್ಯಸತ್ತೆ ಹೆಚ್ಚಿನ ರೀತಿಯಲ್ಲಿ ಉತ್ಕ್ರಾಂತಿ ಪಡೆದಂತೆ ಅದು ತನ್ನ ಪರಿಪಕ್ವತೆಗೆ ಹೆಚ್ಚು ಹತ್ತಿರವಾಗಿರುತ್ತದೆ, ಜನ್ಮಗಳ ನಡುವೆ ಹೆಚ್ಚು ಅಂತರವಿರುತ್ತದೆ. ಕೇವಲ ಸಾವಿರ, ಎರಡು ಸಾವಿರ ವರ್ಷಗಳ ನಂತರ ಮತ್ತೆ ಜನ್ಮತಾಳುವ ಸತ್ತೆಗಳಿವೆ. ರೂಪತಾಳುವಿಕೆಯ ಮನುಷ್ಯ ಹೆಚ್ಚು ಹತ್ತಿರವಿದ್ದಂತೆ ಮರುಜನ್ಮಗಳು ಹೆಚ್ಚು ಹತ್ತಿರವಾಗಿರುತ್ತವೆ. ಅದು ಸಾಗಿ ಹೋಗುವುದು ಪ್ರಾರಂಭಕ್ಕೆ ಹೀಗೆ (ಸಂಜ್ಞೆ) ಎಂದರೆ ಜನರು ತಮ್ಮ ಮಕ್ಕಳ ಮಕ್ಕಳಲ್ಲಿ ಮರುಜನ್ಮತಾಳುತ್ತಾರೆ, ಅದು ಹಾಗಿರುತ್ತದೆ, ಇಲ್ಲವೆ ಕೂಡಲೆ ಹತ್ತಿರವಿರುವ ತಲೆಮಾರಿನಲ್ಲಿ ಜನ್ಮತಾಳುತ್ತಾರೆ, ಆದರೆ ಇದು ಯಾವಾಗಲೂ ಉತ್ಕ್ರಾಂತಿಯ ಪ್ರಾಚೀನ ಸ್ತರದಲ್ಲಿರುತ್ತದೆ ಮತ್ತು ಚೈತ್ಯಸತ್ತೆ ಬಹಳ ಪ್ರಜ್ಞೆಯಿಂದಿರುವುದಿಲ್ಲ, ಅದು ರೂಪತಾಳುವಿಕೆಯ ಹಂತದಲ್ಲಿರುತ್ತದೆ. ಅದು ಹೆಚ್ಚು ಅಭಿವೃದ್ಧಿ ಪಡೆದಂತೆ ಮರುಜನ್ಮಗಳು, ನಾನು



ಹೇಳಿದಂತೆ ಒಂದರಿಂದ ಇನ್ನೊಂದು ಹೆಚ್ಚಿನ ಅಂತರದಲ್ಲಿರುತ್ತವೆ. ಚೈತ್ಯಸತ್ತೆ ಪೂರ್ತಿ ಅಭಿವೃದ್ಧಿ ಪಡೆದಾಗ, ಅಭಿವೃದ್ಧಿಗಾಗಿ ಪೃಥ್ವಿಗೆ ಮರಳಿಬರುವ ಆವಶ್ಯಕತೆ ಇಲ್ಲವಾದಾಗ, ಅದು ಪೂರ್ತಿ ಮುಕ್ತವಾದಾಗ ಅದಕ್ಕೆ ಆಯ್ಕೆಮಾಡಿ–ಕೊಳ್ಳುವುದಿರುತ್ತದೆ, ಆ ಆಯ್ಕೆ ಅದರ ಕಾರ್ಯ ಬೇರೆಡೆಯಲ್ಲಿದೆ ಎಂದು ಅದು ಕಂಡುಕೊಂಡಾಗ ಇನ್ನು ಮುಂದೆ ಪೃಥ್ವಿಗೆ ಬರುವುದಿರುವುದಿಲ್ಲ ಇಲ್ಲವೆ ಅದು ಕೇವಲ ಜನ್ಮತಾಳದೆ ಚೈತ್ಯಪ್ರಜ್ಞೆಯಲ್ಲಿ ಉಳಿದುಕೊಳ್ಳುವುದಕ್ಕೆ ಆದ್ಯತೆ ನೀಡಿದಾಗ ಮರಳಿ ಬರುವುದಿರುವುದಿಲ್ಲ. ಇಲ್ಲವೆ ಅದು ಬಯಸಿದಾಗ, ಬಯಸಿದ ರೀತಿಯಲ್ಲಿ ಬಯಸಿದ ಸ್ಥಳದಲ್ಲಿ ಪರಿಪೂರ್ಣ ಪ್ರಜ್ಞೆಯೊಂದಿಗೆ ಬರಬಹುದು. ವಿಶ್ವಂಭರ ದರ್ಜೆಯ ಶಕ್ತಿಗಳೊಡನೆ ಮತ್ತು ಅಧಿಮಾನಸದ ಅಸ್ತಿತ್ವಗಳೊಡನೆ ಇಲ್ಲವೆ ಬೇರೆ ಯಾವುದೋ ಒಂದರೊಡನೆ ಏಕಗೊಂಡವುಗಳಿರುತ್ತವೆ, ಅವು ಎಲ್ಲ ಕಾಲದಲ್ಲಿ ಪೃಥ್ವಿಯ ವಾತಾವರಣದಲ್ಲಿ ಉಳಿದುಕೊಳ್ಳುತ್ತವೆ ಮತ್ತು ಕಾರ್ಯಕ್ಕಾಗಿ ಒಂದರ ನಂತರ ಒಂದರಂತೆ ದೇಹಧಾರಣೆ ಮಾಡುತ್ತವೆ. ಇದರರ್ಥ ಚೈತ್ಯಸತ್ತೆ ಸಂಪೂರ್ಣವಾಗಿ ರೂಪುಗೊಂಡಾಗ, ಪರಿಪೂರ್ಣವಾಗಿ ಮುಕ್ತವಾದ ಕ್ಷಣ– ಅದು ಸಂಪೂರ್ಣವಾಗಿ ರೂಪುಗೊಂಡಾಗ ಪರಿಪೂರ್ಣವಾಗಿ ಮುಕ್ತವಾಗಿರುತ್ತದೆ– ತನಗೆ ಇಷ್ಟವಾದ ಏನನ್ನೂ ಕೈಕೊಳ್ಳಬಹುದು, ಅದು ಆಯ್ಕೆ ಮಾಡಿಕೊಳ್ಳುವುದರ ಮೇಲೆ ಅವಲಂಬಿಸಿರುತ್ತದೆ, ಹಾಗಾಗಿ "ಅದು ಈ ರೀತಿಯ ಹಾಗಿರುತ್ತದೆ, ಆ ರೀತಿಯ ಹಾಗಿರುತ್ತದೆ" ಎಂದು ಮನುಷ್ಯ ಹೇಳಲಾರ. ಅದು ತನಗೆ ಇಷ್ಟವಾದದ್ದನ್ನು ನಿಖರವಾಗಿ ಕೈಕೊಳ್ಳುತ್ತದೆ ಮತ್ತು ದೇಹದ ಮರಣದ ಸಮಯದಲ್ಲಿ ಅದರ ಮುಂದಿನ ಜನ್ಮ ಏನಾಗಿರುತ್ತದೆ, ಅದು ಏನನ್ನು ಕೈಗೊಳ್ಳುತ್ತದೆ ಎಂಬುದನ್ನು ಘೋಷಿಸುತ್ತದೆ (ಅದು ಸಂಭವಿಸಿದೆ), ಮತ್ತು ಅದು ಕೈಕೊಳ್ಳಲಿರುವುದನ್ನು ಈಗಾಗಲೇ ಆಯ್ದುಕೊಂಡಿರುತ್ತದೆ. ಮೇಲಿಂದ ಮೇಲೆ ಆಗದೆ ಇರುವಂತಹ ಈ ಹಂತದ ಮೊದಲು– ಅದು ಪರಿಪೂರ್ಣವಾಗಿ ಚೈತ್ಯದ ಅಭಿವೃದ್ಧಿಯ ದರ್ಜೆಯ ಮೇಲೆ ಹಾಗೂ ಸತ್ತೆಯ ಸಮಗ್ರ ಪ್ರಜ್ಞೆಯ ಮೂಲಕ ಭರವಸೆ ತಾಳಿದುದರ ಮೇಲೆ ಅವಲಂಬಿಸಿರುತ್ತದೆ– ಅಲ್ಲಿ ಇನ್ನೂ ಮಾನಸಿಕ, ಪ್ರಾಣಿಕ ಹಾಗೂ ಭೌತಿಕ ಪ್ರಜ್ಞೆ ಇರುತ್ತದೆ, ಚೈತ್ಯಸತ್ತೆಯೊಂದಿಗೆ ಕೂಡಿಕೊಂಡಿರುತ್ತದೆ, ಹಾಗಾಗಿ ಮರಣದ ಆ ಕ್ಷಣದಲ್ಲಿ, ದೇಹವನ್ನು ತ್ಯಜಿಸುವ ಆ ಕ್ಷಣದಲ್ಲಿ ಅದು ಒಂದು ಭರವಸೆಯನ್ನು ಇಲ್ಲವೆ ಅಭೀಪ್ಸೆಯನ್ನು ಇಲ್ಲವೆ

ಸಂಕಲ್ಪವನ್ನು ರೂಪಿಸುತ್ತದೆ ಮತ್ತು ಸಾಮಾನ್ಯವಾಗಿ ಇದು ಭವಿಷ್ಯತ್ತಿನ ಜೀವನವನ್ನು ನಿರ್ಧರಿಸುತ್ತದೆ.

**(CWM, 7/86–87)** **– ಶ್ರೀಮಾತೆ**

*

**ಆತ್ಮ ಕೈಕೊಳ್ಳಬೇಕಾದ ಅದರ ವಾತಾವರಣ ಹಾಗೂ ಪ್ರ ಪೂರ್ವಜರ ವಿರುದ್ಧ ಹೋರಾಟ**

**ಪ್ರಶ್ನೆ:** *ಮನುಷ್ಯ ಜಗತ್ತಿನಲ್ಲಿ ಒತ್ತಾಯಕ್ಕೊಳಗಾಗಿ ಜನ್ಮ ತಾಳುತ್ತಾನೆಯೆ?*

**ಶ್ರೀಮಾತೆ:** ಕಳೆದವಾರ ಜನ್ಮ ಕುರಿತು ನಿಮ್ಮ ಬಳಿ ಮಾತನಾಡಿದೆ. ಆತ್ಮಗಳು ದೇಹದಲ್ಲಿ ಹೇಗೆ ಪ್ರವೇಶಿಸುತ್ತವೆ ಎಂಬುದನ್ನು ಹೇಳಿದೆ. ಬಹುಮಟ್ಟಿಗೆ ಪ್ರತಿಯೊಬ್ಬನನ್ನು ಬಹಳ ಅಸಮಾಧಾನಕರ ರೀತಿಯಲ್ಲಿ ರೂಪಿಸಲಾಗುತ್ತದೆ. ಅಪರೂಪದ ಸಂದರ್ಭಗಳು ಬಹಳ ಕಡಿಮೆ ಇರುವುದರಿಂದ ಅವುಗಳ ಬಗ್ಗೆ ಮಾತನಾಡುವುದು ಕಷ್ಟ ಸಾಧ್ಯವಾಗುತ್ತದೆ.

ಈ ಮಬ್ಬು ರೀತಿಯ ಜನ್ಮದಿಂದಾಗಿ ಮನುಷ್ಯ ಭೌತಿಕ ವಿಷಯಗಳ ಭಾರದೊಂದಿಗೆ ಬಂದು ತಲುಪಿರುತ್ತಾನೆ, ಪ್ರಗತಿ ಹೊಂದಲು ಮನುಷ್ಯ ಬಯಸಿದರೆ ಸಾಮಾನ್ಯವಾಗಿ ಅವುಗಳನ್ನು ತೊಡೆದು ಹಾಕಬೇಕಾಗಿರುತ್ತದೆ ಎಂದು ನಾನು ಹೇಳಿದ್ದೇನೆ. ನಾನು ಹೇಳಿದ ವಾಕ್ಯವನ್ನು ಯಾರೋ ಒಬ್ಬರು ಉಲ್ಲೇಖಿಸಿ ಹೇಳಿದ್ದಾರೆ, ಅದು ಹೀಗಿದೆ:

"ನಿಮ್ಮನ್ನು ಇಲ್ಲಿ ಒತ್ತಾಯದಿಂದ ತರಲಾಗಿದೆ, ವಾತಾವರಣವನ್ನು ನಿಮ್ಮ ಮೇಲೆ ಒತ್ತಾಯದಿಂದ ಹೇರಲಾಗಿದೆ. ಸಾಮಾಜಿಕ ಪರಿಸರದಲ್ಲಿದ್ದ ಪೂರ್ವ ಪೂರ್ವಜರ ನಿಯಮಗಳನ್ನು ಒತ್ತಾಯದಿಂದ ಹೇರಲಾಗಿದೆ."

ಮತ್ತು ಈಗ ಆ ಪತ್ರ ಬರೆದ ವ್ಯಕ್ತಿ ನನಗೆ ಪತ್ರ ಬರೆದು ಅದೆಲ್ಲವನ್ನು ಯಾರು ಮಾಡುತ್ತಾರೆ ಎಂದು ಕೇಳಿದ್ದಾನೆ.

ಸಹಜವಾಗಿ ನಾನು ಹೆಚ್ಚು ನಿಕೃಷ್ಟವಾಗಿ ಹೇಳಬಹುದಾಗಿತ್ತು, ಆದರೆ ನಾನು ಸಾಕಷ್ಟು ಸ್ಪಷ್ಟವಾಗಿ ಹೇಳಿದ್ದೇನೆ ಎಂದು ಯೋಚಿಸಿದ್ದೆ.



ದೇಹ ಪುರುಷ ಹಾಗೂ ಸ್ತ್ರೀ ಇವರಿಂದ ರೂಪತಾಳುತ್ತದೆ, ಅವರು ಆ ದೇಹದ ತಂದೆತಾಯಿ ಆಗುತ್ತಾರೆ. ಜಗತ್ತಿನಲ್ಲಿ ದೇಹವನ್ನು ತರುತ್ತಿರುವ ಅವರಿಗೂ ಕೂಡ ಅದು ಈ ಜಗತ್ತಿಗೆ ಬರಲು ಇಷ್ಟಪಡುತ್ತದೆಯೋ ಇಲ್ಲವೆ ಅದು ಅದರ ಅದೃಷ್ಟದ ಪ್ರಕಾರ ನಡೆದು ಹೋಗುತ್ತಿದೆಯೋ ಎಂದು ಕೇಳಲು ಅವರಲ್ಲಿ ಸಾಧನವಿರುವುದಿಲ್ಲ. ಮತ್ತು ಅವರು ರೂಪಿಸಿದ ಅವಶ್ಯವಿರುವ ಶಕ್ತಿಯನ್ನು ಪ್ರಪೂರ್ವಜರ ಸಾದೃಶ್ಯವನ್ನು ಈ ದೇಹದ ಮೇಲೆ ಒಂದು ವಾತಾವರಣವನ್ನು, ನಂತರ ಶಿಕ್ಷಣವನ್ನು ಹೇರುತ್ತಾರೆ, ಅವು ಅದರ ಭವಿಷ್ಯತ್ತಿನ ಬೆಳವಣಿಗೆಗೆ ಬಹುಮಟ್ಟಿಗೆ ಯಾವಾಗಲೂ ಅಡೆತಡೆಗಳಾಗಿರುತ್ತವೆ.

ಹಾಗಾಗಿ ನಾನು ಅದನ್ನು ಹೇಳಿದೆ, ಅದನ್ನು ಪುನರಾವರ್ತಿಸಿ ಹೇಳುತ್ತಿದ್ದೇನೆ– ನಾನು ಸಾಕಷ್ಟು ಸ್ಪಷ್ಟವಾಗಿ ಹೇಳಿದ್ದೆ ಎಂದು ಯೋಚಿಸಿದ್ದೆ– ನಾನು ಭೌತಿಕ ದೇಹವನ್ನು ಹಾಗೂ ಅದರ ತಂದೆತಾಯಂದಿರನ್ನು ಕುರಿತು ಹೇಳಿದ್ದೆ, ಬೇರೆ ಏನನ್ನೂ ಕುರಿತಾಗಿ ಅಲ್ಲ. ಈ ಪಶುಸದೃಶ ಜನ್ಮ ತಾಳುತ್ತಿರುವ ಆತ್ಮ, ಅದು ಅಭಿವೃದ್ಧಿಯ ಮುನ್ನಡೆಯಲ್ಲಾಗಲಿ, ಇಲ್ಲವೆ ಪೂರ್ತಿ ಅಭಿವೃದ್ಧಿ ಹೊಂದಿದ್ದೇ ಆಗಲಿ ಅದರ ಮೇಲೆ ಹೇರಲಾದ ಪರಿಸ್ಥಿತಿಗಳ ವಿರುದ್ಧ ಹೋರಾಡಬೇಕಾಗುತ್ತದೆ, ಅದರಿಂದಾಗಿ ಅದು ತನ್ನ ಮತ್ತೆ ನಿಜವಾದ ಮಾರ್ಗವನ್ನು, ಮತ್ತು ತನ್ನ ಆತ್ಮವನ್ನು ಮತ್ತೆ ಶೋಧಿಸುವಂತಾಗುತ್ತದೆ. ಅಷ್ಟೇ.

**(CWM, 8/199–200)** **– ಶ್ರೀಮಾತೆ**

*

ಆದರೆ ಏನೇ ಆಗಲಿ – ಅತ್ಯಂತ ಒಳ್ಳೆಯ ಸಂದರ್ಭಗಳಲ್ಲೂ ಕೂಡ, ಆತ್ಮ ಪ್ರಜ್ಞೆಯಿಂದ ಬಂದಾಗಲೂ, ಭೌತಿಕ ದೇಹವನ್ನು ಪ್ರಜ್ಞಾಪೂರ್ವಕವಾಗಿ ರೂಪಿಸುವುದರಲ್ಲಿ ಭಾಗವಹಿಸಿದ್ದಾಗಲೂ ಕೂಡ ಪಶುಸದೃಶ ದೇಹ ಪರಿಪೂರ್ಣವಾಗಿ ರೂಪುಗೊಳ್ಳುವವರೆಗೆ ಹೋರಾಡಬೇಕಾಗುತ್ತದೆ, ಈ ಮಾನವ ಪಶುತ್ವದಿಂದ ಬರುವ ಎಲ್ಲ ವಿಷಯಗಳನ್ನು ತಿದ್ದಬೇಕಾಗುತ್ತದೆ.

*

ಅನಿವಾರ್ಯವಾಗಿ ತಂದೆ ತಾಯಂದಿರು ಒಂದು ವಿಶಿಷ್ಟರೂಪ ತಾಳಿರುತ್ತಾರೆ, ಅವರು ವಿಶೇಷವಾಗಿ ಆರೋಗ್ಯದಿಂದಿರಬಹುದು ಇಲ್ಲವೆ

ಅನಾರೋಗ್ಯ ಹೊಂದಿರಬಹುದು, ವಿಷಯಗಳನ್ನು ಅವುಗಳ ಅತ್ಯಂತ ಒಳ್ಳೆಯ ರೀತಿಯಲ್ಲಿ ಕೈಗೆತ್ತಿಕೊಂಡಾಗ ಅವುಗಳಲ್ಲಿ ಪ್ರಪೂರ್ವಜರ ಸಾದೃಶ್ಯಗಳು, ರೂಢಿಗಳು, ಅವಚೇತನದಲ್ಲಿ, ಅಚೇತನದಲ್ಲಿಯೂ ಗುಡ್ಡದಷ್ಟು ರೂಪುಗೊಂಡ ಇರುತ್ತವೆ. ಅವು ತಮ್ಮದೇ ಜನ್ಮದಿಂದ, ಅವರು ಜೀವಿಸಿದ ವಾತಾವರಣದಿಂದ, ತಮ್ಮದೇ ಜೀವನದಿಂದ ಬರುತ್ತವೆ. ಅವರು ಗಮನಾರ್ಹ ವ್ಯಕ್ತಿಗಳಾಗಿದ್ದರೂ ಕೂಡ ಅವರಲ್ಲಿ ನಿಜವಾದ ಚೈತ್ಯಸತ್ತೆಗೆ ವಿರುದ್ಧವಾದ ವಿಷಯಗಳು ಭವ್ಯರೀತಿಯಲ್ಲಿರುತ್ತವೆ– ಅವರು ಅತ್ಯಂತ ಒಳ್ಳೆಯ ವ್ಯಕ್ತಿಗಳಾಗಿರಬಹುದು, ಅತ್ಯಂತ ಪ್ರಜ್ಞಾಪೂರ್ಣರಾಗಿರಬಹುದು. ಅಲ್ಲದೆ ಅಲ್ಲಿ ಸಂಭವಿಸುವುದೆಲ್ಲವೂ ಇರುತ್ತದೆ. ಮನುಷ್ಯ ತನ್ನ ಮಕ್ಕಳ ಶಿಕ್ಷಣವನ್ನು ಕುರಿತು ಬಹಳಷ್ಟು ತೊಂದರೆ ತೆಗೆದುಕೊಂಡರೂ ಕೂಡ ಅವರು ಎಲ್ಲ ಬಗೆಯ ಜನರ ಸಂಪರ್ಕದಲ್ಲಿ ಬರುತ್ತಾರೆ, ಅವರ ಪ್ರಭಾವಕ್ಕೊಳಗಾಗುತ್ತಾರೆ, ಈ ಪ್ರಭಾವಗಳು ಅವಚೇತನದಲ್ಲಿ ಪ್ರವೇಶಿಸುತ್ತವೆ, ನಂತರ ಮನುಷ್ಯ ಅವುಗಳ ವಿರುದ್ಧ ಹೋರಾಡಬೇಕಾಗುತ್ತದೆ. ಅತ್ಯಂತ ಒಳ್ಳೆಯ ಸಂದರ್ಭಗಳಲ್ಲೂ ಕೂಡ ಎಂದು ನಾನು ಹೇಳುತ್ತೇನೆ, ಏಕೆಂದರೆ ಸದ್ಯ ದೇಹ ಆ ರೀತಿಯಲ್ಲಿ ರೂಪುಗೊಂಡಿರುತ್ತದೆ. ನೀವು ಅಸಂಖ್ಯಾತ ತೊಂದರೆಗಳನ್ನು ಎದುರಿಸಬೇಕಾಗುತ್ತದೆ, ಅವು ಹೆಚ್ಚು ಕಡಿಮೆ ಅವಚೇತನದಿಂದ ಮೇಲ್ಮೈಗೆ ಏರಿ ಬರುತ್ತವೆ, ನೀವು ಸಂಪೂರ್ಣವಾಗಿ ಮುಕ್ತರೂ ಮತ್ತು ಸಾಮಾನ್ಯ ರೀತಿಯಲ್ಲಿ ಅಭಿವೃದ್ಧಿ ಹೊಂದುವಂತಹರೂ ಆಗುವವರೆಗೆ ಅವುಗಳ ವಿರುದ್ಧ ಹೋರಾಡಬೇಕಾಗುವುದು.

**(CWM, 8/200–03)** **– ಶ್ರೀಮಾತೆ**

*

**ಆತ್ಮ ಪ್ರಜ್ಞಾವಂತ ಸತ್ತೆಯಾಗಲು ಆರೋಹಣ ಮಾಡುವುದಕ್ಕೆ ಸಾವಿರಾರು ವರ್ಷಗಳು ಬೇಕಾಗುತ್ತವೆ**

**ಪ್ರಶ್ನೆ:** *ಶ್ರೀಮಾತೆಯವರೆ, ದೇಹವೊಂದು ರೂಪು ತಾಳಿದಾಗ ಅದರಲ್ಲಿ ಮರುಜನ್ಮ ತಾಳುವ ಆತ್ಮ ಆ ದೇಹದಲ್ಲಿ ಜನ್ಮತಾಳಲು ಒತ್ತಾಯಕ್ಕೊಳಗಾಗಿರುತ್ತದೆಯೆ?*

**ಶ್ರೀಮಾತೆ:** ನಿನ್ನ ಪ್ರಶ್ನೆಯನ್ನು ನಾನು ಸರಿಯಾಗಿ ಅರ್ಥಮಾಡಿಕೊಳ್ಳಲಾರೆ.



**ಪ್ರಶ್ನೆ:** *ದೇಹದ ರೂಪುತಾಳುವಿಕೆ ಪುರುಷ ಹಾಗೂ ಸ್ತ್ರೀ ಇವರ ಮೇಲೆ ಅವಲಂಬಿಸಿರುತ್ತದೆ, ಆದರೆ ಆ ಮಗುವಿನಲ್ಲಿ ಪ್ರಕಟವಾಗುತ್ತಲಿರುವ ಆತ್ಮ, ರೂಪುಗೊಳ್ಳುತ್ತಿರುವ ದೇಹದಲ್ಲಿ ಪ್ರಕಟವಾಗಲಿರುವ ಆ ಆತ್ಮ ಆ ದೇಹದಲ್ಲಿಯೇ ಪ್ರಕಟವಾಗಲು ಒತ್ತಾಯಕ್ಕೊಳಗಾಗಿರುತ್ತದೆಯೆ?*

**ಶ್ರೀಮಾತೆ:** ಅದು ಭಿನ್ನ ದೇಹಗಳಲ್ಲಿ ಪ್ರಕಟವಾಗಲು ಆಯ್ದುಕೊಳ್ಳುವುದು ಶಕ್ಯವಿದೆ ಎಂದು ನೀನು ಹೇಳುವುದರ ಅರ್ಥವೆ?

**ಪ್ರಶ್ನೆ:** *ಹೌದು.*

**ಶ್ರೀಮಾತೆ:** ಸರಿ, ಅದು ಅಪರೂಪಕ್ಕೆ ಕಂಡುಬರುವಂತಹದು, ಒಟ್ಟಿನಲ್ಲಿ ಮನುಕುಲದ ಭವ್ಯ ಮೊತ್ತದಲ್ಲಿ ಪ್ರಜ್ಞಾಪೂರ್ಣ ಆತ್ಮ ಸ್ವಯಂಪ್ರೇರಿತವಾಗಿ ಮರುಜನ್ಮತಾಳುತ್ತದೆ. ಅದು ಬಹಳ ಅಸಾಮಾನ್ಯವಾದದ್ದೆನಿಸುವ ಏನೋ ಒಂದು. ನಾನು ಈಗಾಗಲೆ ಹೇಳಿದ್ದೇನೆ. ಆತ್ಮ ಪ್ರಜ್ಞಾಪೂರ್ಣವಾಗಿದ್ದಾಗ, ಪೂರ್ತಿ ರೂಪುಗೊಂಡಿದ್ದು ಆದಾಗ ಮತ್ತು ಅದು ಮರು ಜನ್ಮ ತಾಳಬೇಕೆಂದು ಬಯಸಿದಾಗ ಚೈತ್ಯ ಸ್ತರದಿಂದ ತನಗನುಗುಣವಾದ ಚೈತ್ಯಪ್ರಕಾಶವನ್ನು ಪೃಥ್ವಿಯ ಮೇಲೆ ಒಂದು ವಿಶಿಷ್ಟ ಸ್ಥಳದಲ್ಲಿ ನೋಡುತ್ತದೆ. ಅಲ್ಲದೆ ಅದರ ಹಿಂದಿನ ಜನ್ಮತಾಳಿದ್ದರ ಸಮಯದಲ್ಲಿ ಅಲ್ಲಿಂದ ಬಿಟ್ಟುಹೋಗುವುದಕ್ಕಿಂತ, ಪೃಥ್ವಿಯ ವಾತಾವರಣವನ್ನು ತ್ಯಜಿಸುವುದಕ್ಕಿಂತ ಮೊದಲು, ಸಾಮಾನ್ಯವಾಗಿ, ಕೊನೆ ಕಂಡುಕೊಳ್ಳುತ್ತಿರುವ ಜೀವನದಲ್ಲಿ ಆದ ಅನುಭವಗಳ ಪರಿಣಾಮದಿಂದ, ಆತ್ಮ ಹೆಚ್ಚು ಕಡಿಮೆ ಆಯ್ದುಕೊಳ್ಳುತ್ತದೆ– ಎಲ್ಲ ವಿವರಗಳಲ್ಲಿ ಅಲ್ಲ, ಆದರೆ ವಿಸ್ತಾರವಾಗಿ– ಅದರ ಭವಿಷ್ಯತ್ತಿನ ಜೀವನದ ಪರಿಸ್ಥಿತಿಗಳನ್ನು ಆಯ್ದುಕೊಳ್ಳುತ್ತದೆ. ಆದರೆ ಇವು ಅಪರೂಪದ ಸಂದರ್ಭಗಳು. ಬಹುಶಃ ಇಲ್ಲಿ ಅದನ್ನು ಕುರಿತು ನಮಗೆ ಹೇಳಿಕೊಳ್ಳಬಹುದು, ಆದರೆ ಜನರ ಬಹುಭಾಗಕ್ಕೆ, ಅದರಲ್ಲಿ ಶಿಕ್ಷಣ ಪಡೆದವರೂ ಇರಬಹುದು, ಆ ಪ್ರಶ್ನೆ ಉದ್ಭವಿಸುವುದೇ ಇಲ್ಲ. ಮತ್ತು ಆಗ ಬರುವುದೇನೆಂದರೆ ಹೆಚ್ಚು ಕಡಿಮೆ ರೂಪು ತಾಳುತ್ತಿರುವ ಚೈತ್ಯಸತ್ತೆಯ ಹಲವಾರು ಹಂತಗಳಿವೆ, ಪ್ರಕಾಶದ ಕಿಡಿಯಿಂದ ಹಿಡಿದು ಪೂರ್ತಿ ರೂಪುಗೊಳ್ಳುವ ಸತ್ತೆಯವರೆಗೆ ಇದು ಸಾವಿರಾರು ವರ್ಷಗಳ ಕಾಲದವರೆಗೆ ವಿಸ್ತರಿಸುತ್ತ ಹೋಗುತ್ತದೆ. ಆತ್ಮದ ಈ ಆರೋಹಣ ಪ್ರಜ್ಞಾಪೂರ್ಣ

ಸತ್ತೆಯಾಗಲು, ತನ್ನದೆ ಸಂಕಲ್ಪ ಹೊಂದಲು, ತನ್ನ ಜೀವನವನ್ನು ನಿರ್ಧರಿಸುವುದಕ್ಕೆ ಸಮರ್ಥವಾಗಲು ಸಾವಿರಾರು ವರ್ಷಗಳ ಕಾಲ ಬೇಕಾಗುತ್ತದೆ.

"ಇಲ್ಲ, ನಾನು ಈ ದೇಹವನ್ನು ತಿರಸ್ಕರಿಸುತ್ತೇನೆ, ಇನ್ನೊಂದನ್ನು ಹುಡುಕುವವನಿದ್ದೇನೆ" ಎಂದು ಹೇಳುವ ಆತ್ಮವನ್ನು ಕುರಿತು ನೀನು ಯೋಚಿಸುತ್ತಿದ್ದೀ. ಅದು ಅಸಾಧ್ಯವೆಂದು ನಾನು ಹೇಳುವುದಿಲ್ಲ,– ಪ್ರತಿಯೊಂದೂ ಸಾಧ್ಯವಿದೆ. ಅದು ಸಂಭವಿಸುತ್ತಲೇ ಇರುತ್ತದೆ, ವಾಸ್ತವದಲ್ಲಿ ಮಕ್ಕಳು ಮೃತಾವಸ್ಥೆ (still born)ಯಲ್ಲಿ ಜನಿಸುತ್ತಾರೆ. ಅದರರ್ಥ ಯಾವ ಆತ್ಮವೂ ಧರಿಸಲು ಅಲ್ಲಿರಲಿಲ್ಲ, ಅದು ಇತರ ಕಾರಣಗಳಿಂದ ಕೂಡ ಆಗಬಹುದು, ಅದು ವಿಕೃತ ರೂಪ ತಾಳಿದ್ದರಿಂದ ಆಗಿರಬಹುದು, ಅದನ್ನು ಹೇಳುವುದು ಸಾಧ್ಯವಿಲ್ಲ. ಅದು ಅಸಾಧ್ಯವೆಂದು ನಾನು ಹೇಳುವುದಿಲ್ಲ, ಆದರೆ, ಸರ್ವಸಾಧಾರಣವಾಗಿ, ಪ್ರಜ್ಞಾಪೂರ್ಣವಾದ ಮತ್ತು ಮುಕ್ತ ಆತ್ಮ ಪೃಥ್ವಿಯ ಮೇಲೆ ದೇಹಧರಿಸುವುದನ್ನು ಆಯ್ದುಕೊಂಡಾಗ, ಜನ್ಮ ತಾಳುವುದಕ್ಕಿಂತ ಮೊದಲೇ ಈ ದೇಹದ ಮೇಲೆ ಕಾರ್ಯ ಮಾಡುತ್ತದೆ. ಹಾಗಾಗಿ ತಂದೆತಾಯಂದಿರ ಅಜ್ಞಾನದ ಪರಿಣಾಮದಿಂದ ಆಗುವ ಅನನುಕೂಲತೆಗಳನ್ನು ಒಪ್ಪಿಕೊಳ್ಳದೇ ಇರುವುದಕ್ಕೆ ಕಾರಣವಿರುವುದಿಲ್ಲ. ಏಕೆಂದರೆ ಒಂದು ಕಾರಣಕ್ಕಾಗಿ ಅದು ಆ ಸ್ಥಳವನ್ನು ಆಯ್ದುಕೊಂಡಿರುತ್ತದೆ, ಆ ಕಾರಣ ಅಜ್ಞಾನದ್ದಾಗಿರುವುದಿಲ್ಲ, ಅದು ಅಲ್ಲಿ ಪ್ರಕಾಶವನ್ನು ನೋಡಿತು– ಅದು ಸರಳವಾಗಿ ಒಂದು ಸಾಧ್ಯತೆಯ ಪ್ರಕಾಶವಾಗಿರಬಹುದು, ಆದರೆ ಅಲ್ಲಿ ಪ್ರಕಾಶವಿತ್ತು ಮತ್ತು ಆ ಕಾರಣದಿಂದಾಗಿ ಅದು ಅಲ್ಲಿ ಬಂದಿರುತ್ತದೆ. ಹಾಗಾಗಿ "ಅಹಾ! ಇಲ್ಲ, ನಾನು ಅದನ್ನು ಇಷ್ಟಪಡುವುದಿಲ್ಲ" ಎಂದು ಸರಿಯಾಗಿಯೇ ಹೇಳಬಹುದು, ಆದರೆ ಅದು ಇಷ್ಟಪಡುವ ಇನ್ನೊಂದನ್ನು ಹುಡುಕಲು ಅದೆಲ್ಲಿಗೆ ಹೋಗಬೇಕು? ಅದು ಸಂಭವಿಸಬಹುದು, ಅದು ಅಸಾಧ್ಯವೆಂದು ನಾನು ಹೇಳುವುದಿಲ್ಲ, ಆದರೆ ಅದು ಮೇಲಿಂದ ಮೇಲೆ ಸಂಭವಿಸುವುದು ಸಾಧ್ಯವಿಲ್ಲ. ಆತ್ಮ ಪೃಥ್ವಿಯತ್ತ ಚೈತ್ಯಸ್ತರದಿಂದ ನೋಡಿದಾಗ ಮತ್ತು ಅದರ ಮುಂದಿನ ಜನ್ಮದ ಸ್ಥಳವನ್ನು ಆಯ್ದುಕೊಂಡಾಗ ಅದನ್ನು ಸಾಕಷ್ಟು ಹಾಗೂ ವಿವೇಚನಾಶಕ್ತಿಯಿಂದ, ಅಸಭ್ಯರೀತಿಯಲ್ಲಿ ತಪ್ಪುಮಾಡದೆ ಆಯ್ದುಕೊಂಡಿರುತ್ತದೆ.

ಆತ್ಮಗಳು ಆಯ್ದುಕೊಂಡಿರುವುದು ನಂತರ ಬಿಟ್ಟುಕೊಟ್ಟು ಹೋಗಿರುವುದು ಕೂಡ ಸಂಭವಿಸಿದೆ. ಅವು ಬಿಟ್ಟುಕೊಟ್ಟು ಹೋಗುವುದಕ್ಕೆ ಹಲವಾರು



ಕಾರಣಗಳಿವೆ, ಕೆಲವು ದಿನಗಳು ಇಲ್ಲವೆ ವಾರಗಳು ಆದಾಗ, ಚಿಕ್ಕವರಾದ ಮಕ್ಕಳು ಮೃತರಾಗುತ್ತಾರೆ. ಇದು ಕೂಡ ಅಂತಹ ಕಾರಣದಿಂದ ಆಗಿರಬಹುದು. ಬಹಳಷ್ಟು ಸಲ ಆತ್ಮಕ್ಕೆ ತನ್ನ ರೂಪತಾಳುವಿಕೆಯನ್ನು ಪೂರ್ತಿಗೊಳಿಸಲು ಅತಿ ಸ್ವಲ್ಪ ಅನುಭವದ ಆವಶ್ಯಕತೆ ಇರುತ್ತದೆ. ಅದನ್ನು ಈ ಕೆಲವು ವಾರಗಳಲ್ಲಿ ಅದನ್ನು ಅದು ದೊರಕಿಸಿತ್ತು ಮತ್ತು ನಂತರ ಬಿಟ್ಟುಕೊಟ್ಟು ಹೋಯಿತು. ಪ್ರತಿಯೊಂದೂ ಸಾಧ್ಯವಿದೆ, ಜನರ ಕತೆಗಳನ್ನು ಹೇಳಲು ಬೇಕಾಗುವಷ್ಟು ಹಲವಾರು ಕತೆಗಳು ಆತ್ಮದ ಕತೆಗಳನ್ನು ಹೇಳುವುದಕ್ಕೂ ಅವಶ್ಯವಿರುತ್ತವೆ ಎಂದರೆ ಅವು ಅಸಂಖ್ಯಾತವಾಗಿರುತ್ತವೆ ಮತ್ತು ಉದಾಹರಣೆಗಳು ಒಂದರಿಂದ ಇನ್ನೊಂದು ಸಾಧ್ಯವಿದ್ದಷ್ಟು ಭಿನ್ನವಾಗಿರುತ್ತವೆ.

ಹಾಗಾಗಿ ಸ್ವೇಚ್ಛೆಯಿಂದ ನಿರ್ಧಾರ ಮಾಡುವುದು: "ಇದು ಹೀಗಿದೆ, ಅದು ಹಾಗಿದೆ, ಸಂಭವಿಸುವುದು ಅದು, ಅದಲ್ಲ" ಎಂದು ಹೇಳುವುದು ಬಾಲಿಶತನ. ಪ್ರತಿಯೊಂದೂ ಸಂಭವಿಸಬಲ್ಲದು. ಉಳಿದವುಗಳಿಗಿಂತ ಹೆಚ್ಚಿನ ರೀತಿಯಲ್ಲಿ ಕಂಡುಬರುವ ಉದಾಹರಣೆಗಳಿವೆ. ಮನುಷ್ಯ ಸರ್ವಸಾಧಾರಣ ರೀತಿಯಲ್ಲಿ ಹೇಳಬಹುದು, ಆದರೆ ಮನುಷ್ಯ "ಇದು ಸಾಧ್ಯವಿಲ್ಲ ಮತ್ತು ಅದು ಯಾವಾಗಲೂ ಈ ರೀತಿಯದಾಗಿರುತ್ತದೆ, ಆ ರೀತಿಯದಾಗಿರುತ್ತದೆ" ಎಂದು ಎಂದಿಗೂ ಹೇಳಲಾರ. ವಿಷಯಗಳು ಸಂಭವಿಸುವುದು ಹಾಗಿರುವುದಿಲ್ಲ.

**(CWM, 8/201–02)** **– ಶ್ರೀಮಾತೆ**

*

ಮಗುವೊಂದನ್ನು ಉದ್ದೇಶಪೂರ್ವಕವಾಗಿ, ಪ್ರಜ್ಞಾಪೂರ್ಣ ಅಭೀಪ್ಸೆಯೊಂದಿಗೆ, ಅಗೋಚರ ಜಗತ್ತಿಗೆ ಹಾಗೂ ಆಧ್ಯಾತ್ಮಿಕ ಉತ್ಸಾಹದೊಂದಿಗೆ ಕರೆಕೊಡುತ್ತ ಹೆರುವುದು ಮತ್ತು ಅಕಸ್ಮಿಕವೆನ್ನುವಂತೆ, ಅದನ್ನು ಹೆಣಗುವದನ್ನು ಉದ್ದೇಶದಲ್ಲಿರಿಸಿಕೊಳ್ಳದೆ, ಕೆಲವೊಮ್ಮೆ ಅದನ್ನು ಬಯಸದೆ ಇದ್ದಾಗ್ಯೂ ಅದನ್ನು ಹೆರುವುದು ಇವೆರಡರಲ್ಲಿ ಭವ್ಯ ವ್ಯತ್ಯಾಸವಿದೆ ಇದನ್ನು ಹೇಳದೆಯೆ ತಿಳಿದುಕೊಳ್ಳಬಹುದು.

**(CWM, 8/334)** **– ಶ್ರೀಮಾತೆ**

*

## ವಾರ್ತಾಪತ್ರ

### ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 3/8/2018ರಂದು ಮೀರಾಂಬಿಕ ಸ್ಕೂಲ್ ಫಾರ್ ನ್ಯೂ ಏಜ್ ಶಿಕ್ಷಣ ಸಂಸ್ಥೆಯಲ್ಲಿ ಅಂತರಶಾಲಾ ಕಲೆ ಮತ್ತು ಸಾಂಸ್ಕೃತಿಕ ಹಬ್ಬ 'ಅಂಕುರ' ಜರುಗಿತು. ಖ್ಯಾತ ಕ್ಯಾನ್ಸರ್ ವೈದ್ಯ ಡಾ॥ ಸಿ.ಎನ್. ಪಾಟೀಲ್ ಮುಖ್ಯ ಅತಿಥಿಗಳಾಗಿ ಆಗಮಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಶಾಲಾ ಅಧ್ಯಕ್ಷರಾದ ಡಾ॥ ಅಜಿತ್ ಸಬ್ನೀಸ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸುಮಾರು 14 ಶಾಲೆಯ 650 ವಿದ್ಯಾರ್ಥಿಗಳು ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸಿದರು. ಬಿ.ಜಿ.ಎಸ್. ಶಿಕ್ಷಣ ಸಂಸ್ಥೆ ಹೆಚ್ಚಿನ ಪ್ರಶಸ್ತಿಗಳನ್ನು ಗಳಿಸಿತು. ಸಮಾರೋಪ ಸಮಾರಂಭದಲ್ಲಿ ಬ್ಯಾಂಕ್ ಆಫ್ ಬರೋಡ, ವಲಯ ಕಛೇರಿಯ ಸಹಾಯಕ ಪ್ರಬಂಧಕರಾದ ಶ್ರೀ ಸುನಿಲ್ ಸಿನ್ಹರವರು ಆಗಮಿಸಿ ವಿವಿಧ ಸ್ಪರ್ಧೆಯಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಿಸಿದರು. ವಂದೇಮಾತರಂ ಗೀತೆಯೊಂದಿಗೆ ಕಾರ್ಯಕ್ರಮ ಸಮಾಪ್ತಿಯಾಯಿತು.

*

ದಿನಾಂಕ 15/8/2018ರಂದು ಮೀರಾಂಬಿಕ ಸ್ಕೂಲ್ ಫಾರ್ ನ್ಯೂ ಏಜ್ ಶಿಕ್ಷಣ ಸಂಸ್ಥೆಯಲ್ಲಿ 72ನೇ ಸ್ವಾತಂತ್ರ್ಯ ದಿನಾಚರಣೆ ಮತ್ತು ಮಹರ್ಷಿ ಶ್ರೀ ಅರವಿಂದರ 146ನೇ ಜನ್ಮದಿನಾಚರಣೆಯನ್ನು ಆಚರಿಸಲಾಯಿತು. ಶಾಲಾ ಅಧ್ಯಕ್ಷರಾದ ಡಾ॥ ಅಜಿತ್ ಸಬ್ನೀಸ್ ಧ್ವಜಾರೋಹಣ ಮಾಡಿ ಶ್ರೀ ಅರವಿಂದರ ಛಾಯಾಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಶಾಲಾ ಆಡಳಿತಾಧಿಕಾರಿ ಶ್ರೀಮತಿ ಪ್ರತಿಭಾ ಸಬ್ನೀಸ್ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಶಾಲಾ ವಿದ್ಯಾರ್ಥಿಗಳು ದೇಶ ಭಕ್ತಿಗೀತೆ, ನೃತ್ಯ, ಕವಾಯತ್ತು, ಭಾಷಣ ಮೊದಲಾದ ವಿವಿಧ ವಿನೋದಾವಳಿ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ವಂದೇ ಮಾತರಂ ಗೀತೆಯೊಂದಿಗೆ ಕಾರ್ಯಕ್ರಮ ಸಮಾಪ್ತಿಯಾಯಿತು.

*



ದಿನಾಂಕ 15ನೇ ಆಗಸ್ಟ್ 2018ರ ಬುಧವಾರದಂದು ಶ್ರೀ ಅರವಿಂದ ಸಂಕೀರ್ಣದ ವತಿಯಿಂದ ಶ್ರೀ ಅರವಿಂದರ ಜನ್ಮ ದಿನಾಚರಣೆಯನ್ನು ಆಚರಿಸಲಾಯಿತು. ಶ್ರೀ ಅರವಿಂದ ಸಂಕೀರ್ಣದ ಧ್ಯಾನ ಮಂದಿರದಲ್ಲಿ ಬೆಳಿಗ್ಗೆ 10–15 ರಿಂದ 10–35ರವರೆಗೆ ಸಾಮೂಹಿಕ ಧ್ಯಾನ ನಂತರ ಸಂದೇಶ ಪತ್ರ ಹಾಗೂ ಪ್ರಸಾದವನ್ನು ವಿತರಿಸಲಾಯಿತು. ತತ್ಸಂಬಂಧ 10–45 ರಿಂದ 12–15 ರವರೆಗೆ ಡಾ॥ ಟಿ. ರಾಮಕೃಷ್ಣ, ಬೆಂಗಳೂರು ಇವರಿಂದ "Culture: Do we understand it inspite of Sri Aurobindo" ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಈ ಕಾರ್ಯಕ್ರಮಕ್ಕೆ ಅನೇಕ ಗುರು–ಬಂಧುಗಳು ಹಾಗೂ ಶ್ರೀ ಅರವಿಂದ ಸಂಕೀರ್ಣದ ಸಿಬ್ಬಂದಿ ವರ್ಗದವರು ಹಾಜರಿದ್ದರು. ತತ್ಸಂಬಂಧ 15ನೇ ಆಗಸ್ಟ್‌ನಿಂದ 15ನೇ ನವೆಂಬರ್ 2018ರವರೆಗೂ "On Yoga and The Integral Yoga" ಎಂಬ ವಿಷಯದ ಬಗ್ಗೆ ವಸ್ತು ಪ್ರದರ್ಶನವನ್ನು ಆಯೋಜಿಸಲಾಗಿದೆ.

*

ಕರ್ನಾಟಕ ನಿಲಯಂ, ಪಾಂಡಿಚೇರಿ ನೂತನ ಕಟ್ಟಡದ ಉದ್ಘಾಟನಾ ಸಮಾರಂಭ ದಿನಾಂಕ 20/09/2018, ಗುರುವಾರ ಬೆಳಿಗ್ಗೆ 10.30 ಗಂಟೆಗೆ ನೆರವೇರಲಿದೆ. ಡಾ॥ ಅಜಿತ್ ಸಬ್ನೀಸ್, ಅಧ್ಯಕ್ಷರು, ಶ್ರೀ ಅರವಿಂದೋ ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ ಅವರು ಅಧ್ಯಕ್ಷತೆ ವಹಿಸಲಿದ್ದಾರೆ. ಶ್ರೀ ಮನೋಜ್ ದಾಸ್ ಗುಪ್ತ, ಟ್ರಸ್ಟೀ, ಶ್ರೀ ಅರವಿಂದೋ ಆಶ್ರಮ ಅವರು ನೂತನ ಕಟ್ಟಡವನ್ನು ಉದ್ಘಾಟಿಸುವರು. ಶ್ರೀ ಪ್ರದೀಪ್ ನಾರಂಗ್, ಅಧ್ಯಕ್ಷರು, ಶ್ರೀ ಅರವಿಂದೋ ಸೊಸೈಟಿ, ಪಾಂಡಿಚೇರಿ ಅವರು ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಆದುದರಿಂದ ಕರ್ನಾಟಕದ ಎಲ್ಲ ಶ್ರೀ ಅರವಿಂದೋ ಸೊಸೈಟಿ ಶಾಖೆ/ಕೇಂದ್ರಗಳ ಕಾರ್ಯಕಾರಿ ಸಮಿತಿ ಪ್ರತಿನಿಧಿಗಳು ಕಾರ್ಯಕ್ರಮಕ್ಕೆ ಆಗಮಿಸಬೇಕಾಗಿ ವಿನಂತಿಸುತ್ತೇವೆ. ಪ್ರತಿನಿಧಿಗಳಿಗೆ ಊಟದ ಮತ್ತು ಅಂದು ಸಂಜೆ ಉಳಿದುಕೊಳ್ಳುವ ವ್ಯವಸ್ಥೆಯನ್ನು ಮಾಡಲಾಗಿದೆ.

**ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿರಿ –** ಶ್ರೀ ಎ.ಬಿ. ದೇಸಾಯಿ, ಅಧ್ಯಕ್ಷರು, ಕರ್ನಾಟಕ ನಿಲಯಂ, ಪಾಂಡಿಚೇರಿ. ಮೊಬೈಲ್: 94811 24411

*

ಶ್ರದ್ಧಾಂಜಲಿ – ಡಾ॥ ಕೃಷ್ಣ ಶಾಮಾಚಾರ್ಯ ಆಮೂರರವರು ಎಂ.ಎಸ್‌ಸಿ, ಪಿಎಚ್.ಡಿ., ಪಡೆದು ಗಣಿತಶಾಸ್ತ್ರ ಪ್ರೊಫೆಸರ್ ಆಗಿ ಕರ್ನಾಟಕ ಯೂನಿವರ್‌ಸಿಟಿ, ಧಾರವಾಡದಲ್ಲಿ ಸೇವೆ ಸಲ್ಲಿಸಿರುತ್ತಾರೆ. ವೃತ್ತಿಯಲ್ಲಿ ಇವರು ಪ್ರೊಫೆಸರ್ ಪ್ರವೃತ್ತಿಯಲ್ಲಿ ಶ್ರೀಮಾತಾರವಿಂದರ ಅನನ್ಯ ಭಕ್ತರಾಗಿರುತ್ತಾರೆ. ಡಾ॥ ಕೆ.ಎಸ್. ಆಮೂರರವರು ಧಾರವಾಡ, ಶ್ರೀ ಅರವಿಂದೋ ಸೊಸೈಟಿ, ಶಾಖೆ ಸಂಸ್ಥಾಪಕರು ಹಾಗೂ ಬೆಂಗಳೂರಿನ ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್‌ನ ಧರ್ಮದರ್ಶಿ ಹಾಗೂ ಅಖಿಲ ಭಾರತ ಪತ್ರಿಕೆ 'ಕನ್ನಡ ಮಾಸಿಕ', ಇದರ ಸಂಪಾದಕರಾಗಿ ತಮ್ಮ ಜೀವನದ ಕೊನೆ ಕ್ಷಣದವರೆಗೂ ಸುಮಾರು 20 ವರ್ಷಗಳ ಕಾಲ ಸೇವೆ ಸಲ್ಲಿಸಿರುತ್ತಾರೆ. ಶ್ರೀಯುತ ಆಮೂರರವರು ಶ್ರೀಮಾತಾರವಿಂದರ ಹಲವಾರು ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿ–ರುತ್ತಾರೆ. ಶ್ರೀಯುತ ಆಮೂರರವರು ದಿನಾಂಕ: 9–8–2018, ಗುರುವಾರದಂದು ಧಾರವಾಡದ ತಮ್ಮ ಸ್ವ–ಗೃಹದಲ್ಲಿ ಕೊನೆಯುಸಿರೆಳೆದಿರುತ್ತಾರೆ. ಇವರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ಶ್ರೀಮಾತಾರವಿಂದರಲ್ಲಿ ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್‌ನ ಆಡಳಿತ ವರ್ಗ ಹಾಗೂ ಸಿಬ್ಬಂದಿ ವರ್ಗದವರು, ಶ್ರೀಮಾತಾರವಿಂದರ ಭಕ್ತರು ಶ್ರದ್ಧಾಂಜಲಿ ಅರ್ಪಿಸಿರುತ್ತಾರೆ.

*